ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಏಪ್ರಿಲ್ 20, 2021

ಸಂಪುಟ : 47 ಸಂಚಿಕೆ : 350 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



ಸೋಮವಾರ ದಾವಣಗೆರೆಯ ಕಾಳಿಕಾದೇವಿ ರಸ್ತೆಯಲ್ಲಿ ಕಂಡು ಬಂದ ಜನಸ್ತೋಮವಿದು. ಇದನ್ನು ಕಂಡ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಇದು 'ಕೊರೊನಾದ ಸೂಪರ್ ಸ್ಪ್ರೆಡರ್ ರಸ್ತೆ' ಎಂದು ಉದ್ಘರಿಸಿದರು.

# ಮೇ 1ರಿಂದ ಲಸಿಕೆ ಮುಕ್ತ ಮುಕ್ತ

ನವದೆಹಲಿ, ಏ. 19 – ಕೊರೊನಾ ಲಸಿಕೆಯನ್ನು ನಿಯಂತ್ರಣ ಮುಕ್ತಗೊಳಿಸಿರುವ ಕೇಂದ್ರ ಸರ್ಕಾರ, ಮೇ 1ರಿಂದ 18 ವರ್ಷ ಮೀರಿದ ಎಲ್ಲರೂ ಲಸಿಕೆ ಪಡೆಯಬಹುದು ಎಂದು ತಿಳಿಸಿದೆ. ರಾಜ್ಯ ಸರ್ಕಾರಗಳು, ಖಾಸಗಿ ಆಸ್ಪತ್ರೆ ಹಾಗೂ ಕೈಗಾರಿಕಾ ಸಂಸ್ಥೆಗಳು ಲಸಿಕೆಗಳನ್ನು ನೇರವಾಗಿ ಉತ್ಪಾದಕರಿಂದ ಪಡೆಯಲೂ ಸಹ ಅವಕಾಶ ಮಾಡಿಕೊಡಲಾಗಿದೆ.

ಮುಂದಿನ ತಿಂಗಳಿನಿಂದ ಲಸಿಕಾ ಅಭಿಯಾನದ ಮೂರನೇ ಹಂತ ಆರಂಭವಾಗಲಿದೆ. ಈ ಹಂತದಲ್ಲಿ ಲಸಿಕೆ ಉತ್ಪಾದಕರು ಶೇ.50ರಷ್ಟು ಲಸಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸಬೇಕಿದೆ. ಉಳಿದವನ್ನು ರಾಜ್ಯಗಳು ಹಾಗೂ ಮುಕ್ತ ಮಾರುಕಟ್ಟೆಗೆ ಮಾರಬಹುದಾಗಿದೆ.

ರಾಜ್ಯ ಸರ್ಕಾರಗಳು ಹಾಗೂ ಮುಕ್ತ ಮಾರುಕಟ್ಟೆಗೆ ಮಾರುವ ಲಸಿಕೆಯ ಬೆಲೆಯನ್ನು ಕಂಪನಿಗಳು ಮೊದಲೇ ಪ್ರಕಟಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಬೆಲೆಗಳನ್ನು ಆಧರಿಸಿ ರಾಜ್ಯಗಳು, ಖಾಸಗಿ ಆಸ್ಪತ್ರೆಗಳು, ಕೈಗಾರಿಕಾ ಸಂಸ್ಥೆಗಳು ಮತ್ತಿತರರು



18 ವರ್ಷ ಮೀರಿದ ಎಲ್ಲರಿಗೂ ಲಸಿಕೆ, ರಾಜ್ಯಗಳು ಹಾಗೂ ಖಾಸಗಿ ಆಸ್ಪತ್ರೆಗಳು ನೇರವಾಗಿ ಉತ್ಪಾದಕರಿಂದ ಲಸಿಕೆ ಖರೀದಿಸಲು ಅನುಮತಿ

ಲಸಿಕೆಗಳನ್ನು ಉತ್ಪಾದಕರಿಂದ ಪಡೆಯಬಹುದಾಗಿದೆ.

ಕೇಂದ್ರ ಸರ್ಕಾರದಿಂದ ಬರುವ ಲಸಿಕೆಗಳನ್ನು ಹೊರತು ಪಡಿಸಿ ಉಳಿದ ಲಸಿಕೆಗಳನ್ನಷ್ಟೇ ಖಾಸಗಿ ಆಸ್ಪತ್ರೆಗಳು ಖರೀದಿಸಲು ಅವಕಾಶವಿದೆ. ಖಾಸಗಿ ಯವರಿಗೆ ಲಸಿಕೆ ಪೂರೈಸುವವರು ಘೋಷಿತ ಬೆಲೆ ಯಲ್ಲಿ ಪಾರದರ್ಶಕವಾಗಿ ಅರ್ಹರಿಗೆ ಪೂರೈಸ ಬೇಕಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸರ್ಕಾರಿ ಕೇಂದ್ರಗಳಲ್ಲಿ ಈ ಹಿಂದಿನ ರೀತಿಯಲ್ಲೇ ಮುಂಚೂಣಿ ಕಾರ್ಯಕರ್ತರು ಹಾಗೂ 45 ವರ್ಷ ಮೀರಿದ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡುವುದನ್ನು ಮುಂದುವರೆಸಲಾಗುವುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೇ 1ರಿಂದ 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ಪೂರೈಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸರ್ಕಾರ ಕಳೆದ ಒಂದು ವರ್ಷದಿಂದ ಅತಿ ಹೆಚ್ಚು ಭಾರತೀಯರಿಗೆ ಲಸಿಕೆ ಪೂರೈಸಲು ಶ್ರಮಿಸುತ್ತಿದೆ. ಭಾರತ ದಾಖಲೆಯ ವೇಗದಲ್ಲಿ ಲಸಿಕೆ ಅಭಿಯಾನ ನಡೆಸುತ್ತಿದೆ ಹಾಗೂ ಮತ್ತಷ್ಟು ವೇಗದಲ್ಲಿ ಲಸಿಕೆ ಒದಗಿಸಲಿದೆ ಎಂದು ಸಭೆಯಲ್ಲಿ ಪ್ರಧಾನಿ ಹೇಳಿದ್ದಾರೆ. ಭಾರತದಲ್ಲಿ ಸೋಮವಾರ ಒಂದೇ ದಿನ 2.73 ಲಕ್ಷ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 1,619 ಜನ ಸಾವನ್ನಪ್ಪಿದ್ದಾರೆ. ಇದುವರೆಗೂ ದೇಶದಲ್ಲಿ 12.38 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ.

ಮೇ 1ರಿಂದ ಹದಿನೆಂಟು ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡುವಾಗ ಸರ್ಕಾರ ನಿಗದಿಪಡಿಸಿರುವ ಪ್ರಕ್ರಿಯೆ (2ನೇ ಪುಟಕ್ಕೆ)

# ಅಂತರ ಮರೆತ ಅಂಗಡಿಗಳಿಗೆ ದಂಡದ ಬಿಸಿ

## ವಿಜಯಲಕ್ಷ್ಮಿ ರಸ್ತೆ, ಕಾಳಿಕಾದೇವಿ ರಸ್ತೆ ಅಂಗಡಿಗಳಿಗೆ 50 ಸಾವಿರ ರೂ.ವರೆಗೆ ದಂಡ

ದಾವಣಗೆರೆ, ಏ. 19 - ನಗರದ ಜನನಿಬಿಡ ಮಾರುಕಟ್ಟೆಯ ಕೇಂದ್ರ ಬಿಂದುವಾದ ವಿಜಯಲಕ್ಷ್ಮಿ ರಸ್ತೆ, ಕಾಳಿಕಾದೇವಿ ರಸ್ತೆಗಳಲ್ಲಿರುವ ಅಂಗಡಿಗಳ ಮೇಲೆ ದಾಳಿ ನಡೆಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನೇತೃತ್ವದ ತಂಡ, ಸಾಮಾಜಿಕ ಅಂತರ ಕಾಯ್ದುಕೊಳ್ಳದ ಹಾಗೂ ಕೋವಿಡ್ ಮಾರ್ಗಸೂಚಿ ಪಾಲಿಸದ ಅಂಗಡಿಗಳಿಗೆ ದಂಡ ವಿಧಿಸಿದೆ.

ಅಂಗಡಿಗಳ ಒಳಗೆ ಹಾಗೂ ಅಂಗಡಿಗಳ ಹೊರಗೆ ಜನ ನೆರೆದಿದ್ದನ್ನು ನೋಡಿದ ಜಿಲ್ಲಾಧಿಕಾರಿ, ಇದು 'ಕೊರೊನಾದ ಸೂಪರ್ ಸ್ಪ್ರೆಡರ್ ರಸ್ತೆ'ಯಂತಿದೆ ಎಂದು ಉದ್ಘರಿಸಿದರು.

### ದಾವಣಗೆರೆಗೆ ಬರಬ್ಯಾಡ್ರಿ

**ಖರೀದಿಗಾಗಿ ಬೇರೆ ಬೇರೆ ಊರುಗಳಿಂದ ಬಂದ ಜನರ ಜೊತೆ ಮಾತನಾಡಿದ ಜಿಲ್ಲಾಧಿಕಾರಿ ಬೀಳಗಿ, ದಾವಣಗೆರೆ ಜಿಲ್ಲೆಯಲ್ಲೀಗ 800ಕ್ಕೂ ಹೆಚ್ಚು ಸಕ್ರಿಯ ಸೋಂಕಿತರಿದ್ದಾರೆ. ಇವರಲ್ಲಿ ಬಹುತೇಕರು ದಾವಣಗೆರೆಯವರೇ ಆಗಿದ್ದಾರೆ. ನೀವು ಖರೀದಿಗಾಗಿ ಇಲ್ಲಿಗೆ ಬರದೇ ನಿಮ್ಮ ಊರಲ್ಲೇ ಖರೀದಿ ಮಾಡಿಕೊಳ್ಳಿ ಎಂದು ಮನವಿ ಮಾಡಿಕೊಂಡರು.**

ಅಂಗಡಿಯ ಒಳಗೆ ಬರುವಾಗಲೇ ಸ್ಯಾನಿಟೈಜರ್ ಬಳಕೆಗೆ ಅವಕಾಶ ಇರಬೇಕು ಎಂದು ಅಂಗಡಿಯವರಿಗೆ ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿ ಬೀಳಗಿ, ಮಾರ್ಗಸೂಚಿಗಳನ್ನು ಪಾಲಿಸದೇ ಇದ್ದರೆ ದಂಡವಷ್ಟೇ ಅಲ್ಲದೇ ನೋಟಿಸ್ ಕಳಿಸಿ ಎಫ್.ಐ.ಆರ್. ದಾಖಲಿಸಲಾಗುವುದು ಹಾಗೂ ಅಂಗಡಿಯ ಲೈಸೆನ್ಸ್ ರದ್ದುಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಬಟ್ಟೆ ಅಂಗಡಿ ಹಾಗೂ ಬಂಗಾರದ ಅಂಗಡಿಗಳಲ್ಲಿ ಸಾಮಾಜಿಕ ಅಂತರ ಮರೆಯಾಗಿದ್ದು, ಪ್ರಮುಖವಾಗಿ ಕಂಡು ಬಂತು. ಈ ಸಂದರ್ಭದಲ್ಲಿ ಅಂಗಡಿ ಯವರಿಗೆ 5 ಸಾವಿರ ರೂ.ಗಳಿಂದ ಹಿಡಿದು 50 ಸಾವಿರ ರೂ.ಗಳವರೆಗೆ ದಂಡ ವಿಧಿಸಲಾಯಿತು.

**ಅಳಲು - ಆಕ್ರೋಶ :** ಸಾಮಾಜಿಕ ಅಂತರವಿಲ್ಲದ ಕಾರಣಕ್ಕೆ ದಂಡ ವಿಧಿಸಿದಾಗ ಕೆಲ ವರ್ತಕರು ನಮ್ಮ ತಪ್ಪಾಗಿದೆ, ಅರ್ಥ ಮಾಡಿಕೊಂಡಿದ್ದೇವೆ. ದಂಡ ಕಡಿಮೆ ಮಾಡಿಕೊಳ್ಳಿ ಎಂದು ಮನವಿ ಮಾಡಿಕೊಂಡರು. ಆದರೆ, ಅದಕ್ಕೆ ಜಿಲ್ಲಾಧಿಕಾರಿ ಒಪ್ಪಲಿಲ್ಲ.

ಇನ್ನು ಕೆಲವರು ಜಿಲ್ಲಾಧಿಕಾರಿಗಳ ಸೂಚನೆಯಂತೆ ದಂಡ ವಸೂಲಿಗೆ ಬಂದ ಪಾಲಿಕೆ ಸಿಬ್ಬಂದಿಯ ಜೊತೆ ಚಕಮಕಿ ನಡೆಸುತ್ತಾ, ನಮಗೆ ಸಾಮಾಜಿಕ ಅಂತರ ಹೇಳುತ್ತೀರಿ, ಆದರೆ ನೀವೇ (2ನೇ ಪುಟಕ್ಕೆ)



### ಅಂಗಡಿ ಮುಚ್ಚಿಸಿ, ಕೇಸ್ ಹಾಕಿಸುತ್ತೇವೆ

**ಕೋವಿಡ್ ನಿಯಮ ಉಲ್ಲಂಘಿಸುವ ವರ್ತಕರಿಗೆ ಡಿಸಿ ಎಚ್ಚರಿಕೆ**

ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವವರು ಹಾಗೂ ಜನರು ಸಹಕರಿಸಿದರೆ ಮಾತ್ರ ಕೊರೊನಾದ ಎರಡನೇ ಅಲೆ ಹಾಗೂ ಸಾವು - ನೋವುಗಳನ್ನು ತಡೆಯಲು ಸಾಧ್ಯ ಎಂದಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ನಿಯಮಗಳನ್ನು ಉಲ್ಲಂಘಿಸಿದರೆ ಅಂಗಡಿಯ ಬಾಗಿಲು ಮುಚ್ಚಿಸಿ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದ್ದಾರೆ.

ಕೊರೊನಾದ ಪರಿಸ್ಥಿತಿಯಲ್ಲಿ ಎಂದಿನಂತೆ ನೋಡಿಕೊಳ್ಳುತ್ತೇವೆ ಎಂದರೆ ಸೂಕ್ತವಾಗದು. ಮಾರ್ಗಸೂಚಿ ಅಣಕಿಸುವ ರೀತಿ ವ್ಯಾಪಾರ ನಡೆಸಲಾಗದು ಎಂದವರು ಹೇಳಿದ್ದಾರೆ.

ಮೊದಲ ಹಂತದಲ್ಲಿ 50 ಸಾವಿರ ರೂ.ಗಳವರೆಗೆ ದಂಡ ಹಾಕಿದ್ದೇವೆ. ಇದಕ್ಕೂ ಮೀರಿ ನಿಯಮ ಉಲ್ಲಂಘನೆ ಮುಂದುವರೆದರೆ ಅಂಗಡಿಗಳಿಗೆ ಹಾಗೂ ಛತ್ರಗಳಿಗೆ ಬೀಗ ಜಡಿಯುತ್ತೇವೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಹನುಮಂತರಾಯ, ಜನರು ಸ್ವಯಂ ಪ್ರೇರಿತವಾಗಿ ಕಾಯ್ದೆಗೆ ಗೌರವ ಕೊಡಬೇಕು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಎಂದರು. ವರ್ತಕರು ದಂಡ ಹಾಕಿದ ನಂತರವೂ ನಿಯಮಗಳನ್ನು ಪಾಲಿಸದಿದ್ದರೆ ಪಾಲಿಕೆ ನೋಟಿಸ್ ಕಳಿಸಲಿದೆ. ನಂತರ ಕೇಸ್ ದಾಖಲಿಸುತ್ತೇವೆ ಎಂದು ಎಚ್ಚರಿಸಿದ್ದಾರೆ.

### ರೇಣುಕಾಚಾರ್ಯ ಆಸ್ಪತ್ರೆಗೆ ದಾಖಲು



ದಾವಣಗೆರೆ, ಏ.19- ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯಗೆ ಭಾನುವಾರವಷ್ಟೇ ಕೊರೊನಾ ಪಾಸಿಟಿವ್ ಪತ್ತೆಯಾಗಿತ್ತು. ಅವರ ಆರೋಗ್ಯದಲ್ಲಿ ಏರುಪೇರು ಆದ ಹಿನ್ನೆಲೆಯಲ್ಲಿ ಇಂದು ಚಿಗಟೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ.

ಪಾಸಿಟಿವ್ ಪತ್ತೆಯಾದ ಹಿನ್ನೆಲೆಯಲ್ಲಿ (2ನೇ ಪುಟಕ್ಕೆ)

### ಜಿಲ್ಲೆಯಲ್ಲಿ 199 ಜನರಿಗೆ ಸೋಂಕು

ದಾವಣಗೆರೆ, ಏ. 19- ಜಿಲ್ಲೆಯಲ್ಲಿ ಕೊರೊನಾ ಪ್ರಕರಣಗಳು ದಿನದಿಂದ ದಿನಕ್ಕೆ ಏರಿಕೆ ಯಾಗುತ್ತಲೇ ಇದ್ದು ಸೋಮವಾರ 199 ಪ್ರಕರಣಗಳು ವರದಿಯಾಗಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 131, ಹರಿಹರ ಹಾಗೂ ಜಗಳೂರಿನಲ್ಲಿ ತಲಾ 4, ಚನ್ನಗಿರಿಯಲ್ಲಿ 34, ಹೊನ್ನಾಳಿಯಲ್ಲಿ 20 ಹಾಗೂ ಹೊರ ಜಿಲ್ಲೆಯ (2ನೇ ಪುಟಕ್ಕೆ)




# ಜಿ.ಪಂ., ತಾ.ಪಂ.ಚುನಾವಣೆ ಮುಂದೂಡಲು ನಿರ್ಧಾರ

ಬೆಂಗಳೂರು, ಏ. 19 - ರಾಜ್ಯ ದಲ್ಲಿ ಕೊರೊನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆ ಮುಂದೂಡಲು ಸರ್ಕಾರ ಮುಂದಾಗಿದೆ.


ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಚುನಾವಣೆ ಮುಂದೂ ಡುವ ಸಂಬಂಧ ಸಂಪುಟ ಸಭೆಯಲ್ಲಿ ಚರ್ಚಿಸಿ, ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದ್ದಾರೆ.

**ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ**

ಅವಧಿ ಮುಗಿದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿಗಳಿಗೆ ಆಡಳಿತಾಧಿ ಕಾರಿಗಳನ್ನು ನೇಮಿಸಬೇಕಾಗುತ್ತದೆ. ಈ ಸಂಬಂಧವು ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳ ಲಾಗುವುದು. ರಾಜ್ಯದಲ್ಲಿ ದಿನದಿಂದ ದಿನಕ್ಕೆ ಸೋಂಕು ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಇಂತಹ ಕ್ರಮಕ್ಕೆ ಮುಂದಾಗಿದೆ ಎಂದವರು ತಿಳಿಸಿದ್ದಾರೆ.

ಚುನಾವಣೆ ಮುಂದೂಡುವ ಸಂಬಂಧ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿದ್ದು, ಅವರು ಸಹ ಈ ಸಂದರ್ಭದಲ್ಲಿ ಚುನಾವಣೆ ನಡೆಸುವುದು ಸಾಧ್ಯವಿಲ್ಲ. ಸುಮಾರು 3.5 ಕೋಟಿ ಮತದಾರರು ಈ ಚುನಾವಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ಮುಂದೂಡುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತವಾಗಿದೆ. ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ (2ನೇ ಪುಟಕ್ಕೆ)

### ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ನಿಧನ



ಬೆಂಗಳೂರು, ಏ.19 - ನಾಡಿನ ಖ್ಯಾತ ಸಂಶೋಧಕ, ನಿಘಂಟು ತಜ್ಞ ಪ್ರೊ. ಜಿ.ವೆಂಕಟಸುಬ್ಬಯ್ಯ ಅವರು ಸೋಮವಾರ ರಾತ್ರಿ 1.15 ರ ವೇಳೆಗೆ ತಮ್ಮ ವಯೋ ಸಹಜ ಕಾರಣಗಳಿಂದ 108 ನೇ ವಯಸ್ಸಿನಲ್ಲಿ ನಿಧನರಾದರು. ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಖ್ಯಾತ ವಿದ್ವಾಂಸರು ಹಾಗೂ ಜನಪ್ರಿಯ (2ನೇ ಪುಟಕ್ಕೆ)




### ಎಸ್.ಕೆ. ವೀರಣ್ಣ, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಉಪಾಧ್ಯಕ್ಷ



ದಾವಣಗೆರೆ,ಏ.19- ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ಉಪಾಧ್ಯಕ್ಷರಾಗಿ ಬ್ಯಾಂಕಿನ ಹಿರಿಯ ನಿರ್ದೇಶಕರಲ್ಲೊಬ್ಬರಾದ ಎಸ್.ಕೆ. ವೀರಣ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಬ್ಯಾಂಕಿನ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಕಿರುವಾಡಿ ವಿ. ಸೋಮಣ್ಣ ಅವರು ನೀಡಿದ ರಾಜೀನಾಮೆಯಿಂದಾಗಿ ತೆರವಾದ ಸ್ಥಾನಕ್ಕೆ ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಎಸ್.ಕೆ. ವೀರಣ್ಣ ಅವರ ಹೆಸರನ್ನು ಬ್ಯಾಂಕಿನ ನಿರ್ದೇಶಕರಾದ ರಮಣ್ ಲಾಲ್ ಪಿ. ಸಂಘವಿ ಅವರು ಸೂಚಿಸಿದರೆ, ಮತ್ತೋರ್ವ ನಿರ್ದೇಶಕರಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ ಅವರು ಅನುಮೋದಿಸಿದರು.

ಆಯ್ಕೆ ಪ್ರಕ್ರಿಯೆ ನಂತರ ನಡೆದ ಅಭಿನಂದನಾ (2ನೇ ಪುಟಕ್ಕೆ)



# ಕೊರೊನಾ ಈಗಲೂ ವಯಸ್ಸಾದವರಿಗೆ ಕಂಟಕ



## ಎರಡು ಕೊರೊನಾ ಅಲೆಗಳಲ್ಲಿ ಸಾವಿನ ಸ್ವರೂಪ ಬದಲಾಗಿಲ್ಲ

ನವದೆಹಲಿ, ಏ. 19 – ಕೊರೊನಾ ಸೋಂಕಿಗೆ ಈಗಲೂ ವಯಸ್ಸಾದವರೇ ಸಿಲುಕುತ್ತಿದ್ದಾರೆ ಎಂದು ಹೇಳಿರುವ ಸರ್ಕಾರಿ ವೈದ್ಯಕೀಯ ಪರಿಣಿತರು, ಶೇ.70ರಷ್ಟು ಸೋಂಕಿತರು 40 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರಾಗಿದ್ದಾರೆ. ಎರಡೂ ಕೊರೊನಾ ಅಲೆಗಳಲ್ಲಿ ಸಾವಿನ ಸ್ವರೂಪದಲ್ಲಿ ಬದಲಾವಣೆಯಾಗಿಲ್ಲ ಎಂದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕ ಬಲರಾಮ್ ಭಾರ್ಗವ, ಎರಡನೇ ಅಲೆಯಲ್ಲಿ ಆಕ್ಸಿಜನ್ ಅಗತ್ಯ ಹೆಚ್ಚಾಗಿದೆ. ಆದರೆ, ವೆಂಟಿಲೇಟರ್ ಅಗತ್ಯ ಹೆಚ್ಚಾಗಿಲ್ಲ ಎಂದಿದ್ದಾರೆ.

ಎರಡನೇ ಅಲೆಯಲ್ಲಿ ಉಸಿರಾಟದ ಸಮಸ್ಯೆ ಹೆಚ್ಚಾಗಿದೆ. ಒಣ ಕೆಮ್ಮು ಹಾಗೂ ಗಂಟಲು ಸೋಂಕಿನ ಲಕ್ಷಣಗಳು ಮೊದಲ ಅಲೆಯಲ್ಲಿ ಹೆಚ್ಚಾಗಿದ್ದವು ಎಂದಿದ್ದಾರೆ.

ಎರಡನೇ ಅಲೆಯಲ್ಲಿ ಉಬ್ಬಸದ ಸಮಸ್ಯೆ ಹಿಂದಿನ ಬಾರಿಗಿಂತ ಹೆಚ್ಚಾಗಿದೆ. ಆದರೆ, ಒಣಕೆಮ್ಮು, ವೇಗದ ಉಸಿರಾಟ, ವಾಸನೆ ಕಳೆದುಕೊಳ್ಳುವುದು, ಮೈ ಕೈ ನೋವು, ಛಳಿ, ಮಂಡಿ ನೋವು, ಬಳಲಿಕೆ ಹಾಗೂ ತಲೆ ನೋವುಗಳು ಮೊದಲ ಅಲೆಯಲ್ಲಿ ಹೆಚ್ಚಾಗಿತ್ತು ಎಂದವರು ಹೇಳಿದ್ದಾರೆ.

ಮೊದಲ ಹಾಗೂ ಎರಡನೇ ಅಲೆಯಲ್ಲಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳ ಸಾವಿನ ಸ್ವರೂಪದಲ್ಲಿ ಬದಲಾವಣೆಯಾಗಿಲ್ಲ. ಮೊದಲ ಅಲೆಯಲ್ಲಿ ಸೋಂಕಿತರ ಪೈಕಿ ಶೇ.9.6ರಷ್ಟು ಜನರು ಆಸ್ಪತ್ರೆಗೆ ದಾಖಲಾಗಿದ್ದರು. ಎರಡನೇ ಅಲೆಯಲ್ಲಿ ಶೇ.9.7ರಷ್ಟು ಸೋಂಕಿತರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದವರು ಹೇಳಿದ್ದಾರೆ. ಮೊದಲ ಅಲೆಯಲ್ಲಿ ಶೇ.41.1ರಷ್ಟು ಜನರಿಗೆ ಆಕ್ಸಿಜನ್ ಅಗತ್ಯವಾಗಿತ್ತು. ಎರಡನೇ ಅಲೆಯಲ್ಲಿ ಶೇ.54.5ರಷ್ಟು ಜನರಿಗೆ ಆಕ್ಸಿಜನ್ ಅಗತ್ಯವಾಗಿದೆ. ಆದರೆ, ಮೊದಲ ಅಲೆಗೆ ಹೋಲಿಸಿದರೆ ವೆಂಟಿಲೇಟರ್ ಅಗತ್ಯ ಶೇ.37.3ರಿಂದ ಶೇ.27.8ಕ್ಕೆ ಇಳಿದಿದೆ ಎಂದವರು ಹೇಳಿದ್ದಾರೆ.

ಎರಡೂ ಅಲೆಗಳಲ್ಲಿ ಶೇ.70ರಷ್ಟು ಸೋಂಕಿತರು 40 ವರ್ಷ ಮೀರಿದವರಾಗಿದ್ದಾರೆ. ಯುವಕರಲ್ಲಿ ಸೋಂಕಿಗೆ ಗುರಿಯಾಗುವ ಪ್ರಮಾಣ ಸ್ವಲ್ಪವಷ್ಟೇ ಹೆಚ್ಚಾಗಿದೆ ಎಂದವರು ತಿಳಿಸಿದ್ದಾರೆ.

ಮೊದಲ ಅಲೆಯಲ್ಲಿ ಸೋಂಕಿಗೆ ಗುರಿಯಾದವರಲ್ಲಿ 30 ವರ್ಷದೊಳಗಿನವರ ಪ್ರಮಾಣ ಶೇ.31ರಷ್ಟಿತ್ತು. ಈ ಬಾರಿ ಅದು ಶೇ.32ರಷ್ಟಿದೆ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ವಿ.ಕೆ. ಪೌಲ್ ಹೇಳಿದ್ದಾರೆ.

ಈ ನಡುವೆ, ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ನೀಡಿರುವ ಎ.ಐ.ಐ.ಎಂ.ಎಸ್. ನಿರ್ದೇಶಕ ಡಾ. ರಣದೀಪ್ ಗುಲೇರಿಯ, ರೆಮ್ಡಿಸಿವಿರ್ ಔಷಧಿ ಕೊರೊನಾಗೆ ರಾಮಬಾಣವಲ್ಲ. ಇದರಿಂದ ಸಾವಿನ ಪ್ರಮಾಣ ಕಡಿಮೆಯಾಗುವುದಿಲ್ಲ ಎಂದಿದ್ದಾರೆ.

ಆಸ್ಪತ್ರೆಗೆ ದಾಖಲಾದವರಲ್ಲಿ ಅಗತ್ಯವಿರುವ ವರಿಗೆ ಮಾತ್ರ ರೆಮ್ಡಿಸಿವಿರ್ ನೀಡಬೇಕಾಗುತ್ತದೆ. ಈ ಔಷಧ ಸೀಮಿತ ಪಾತ್ರ ಹೊಂದಿದ್ದು, ಅದನ್ನು ಎಚ್ಚರಿಕೆಯಿಂದ ಬಳಸಬೇಕಿದೆ ಎಂದಿದ್ದಾರೆ.

# ದೆಹಲಿ ಲಾಕ್‌ಡೌನ್ : ಕಾರ್ಮಿಕರ ಸಾಮೂಹಿಕ ವಾಪಸಾತಿ

## ಬಾರ್‌ಗಳ ಮುಂದೆ ಮೈಲುದ್ದದ ಸರದಿ

ನವದೆಹಲಿ, ಏ. 19 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಕೊರೊನಾ ಹಿನ್ನೆಲೆಯಲ್ಲಿ ವಾರದ ಲಾಕ್‌ಡೌನ್ ಪ್ರಕಟಿಸಿದ್ದಾರೆ. ಈ ಅವಧಿಯಲ್ಲಿ ನಾನು ವಲಸೆ ಕಾರ್ಮಿಕರ ಜೊತೆಗಿರುತ್ತೇನೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದರೂ ಸಹ ಸಾವಿರಾರು ವಲಸೆ ಕಾರ್ಮಿಕರು ತಮ್ಮ ರಾಜ್ಯಗಳಿಗೆ ತೆರಳುತ್ತಿದ್ದಾರೆ.

ಸಾವಿರಾರು ಜನರು ಬಸ್ ಹಾಗೂ ರೈಲುಗಳ ಮೂಲಕ ರಾಜಧಾನಿ ಬಿಟ್ಟು ಹೊರಡುತ್ತಿದ್ದಾರೆ. ಈ ಬಾರಿಯ ಲಾಕ್‌ಡೌನ್ ಅಲ್ಪಾವಧಿಯದಾಗಿರುತ್ತದೆ ಎಂದು ಕೇಜ್ರಿವಾಲ್ ಭರವಸೆ ನೀಡಿದ್ದೂ ಪ್ರಯೋಜನಕ್ಕೆ ಬಂದಿಲ್ಲ. ದೆಹಲಿ ಸರ್ಕಾರ ಸೋಮವಾರ ರಾತ್ರಿ 10ರಿಂದ ಏಪ್ರಿಲ್ 26ರವರೆಗೆ ಬೆಳಗಿನ ಜಾವ 5ರವರೆಗೆ ಲಾಕ್‌ಡೌನ್ ಘೋಷಿಸಿದೆ.

ವಲಸೆ ಕಾರ್ಮಿಕರು ತಮ್ಮ ನೆಲೆಗಳಿಗೆ ಮರಳಲು ವಾಹನದ ವ್ಯವಸ್ಥೆ ಮಾಡಲು ಇಲ್ಲವೇ ಅವರು ಉಳಿದುಕೊಳ್ಳಲು ಆಶ್ರಯ ತಾಣಗಳ ವ್ಯವಸ್ಥೆ ಮಾಡಲು ಅಧಿಕಾರಿಗಳ ಜೊತೆ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಈ ನಡುವೆ, ಲಾಕ್‌ಡೌನ್ ಹಿನ್ನೆಲೆಯಲ್ಲಿ ಜನರು ಮದ್ಯದ ಅಂಗಡಿ ಎದುರು ಉದ್ದನೆಯ ಸಾಲಿನಲ್ಲಿ ನಿಂತಿದ್ದಾರೆ. ಇದರಿಂದಾಗಿ ಸಾಮಾಜಿಕ ಅಂತರದ ನಿಯಮಗಳು ಗಾಳಿಗೆ ತೂರಿದ್ದವು. ಮಹಾರಾಷ್ಟ್ರದಲ್ಲಿ ಮದ್ಯವನ್ನು ಆನ್‌ಲೈನ್ ಮೂಲಕ ಮನೆಗೆ ತಲುಪಿಸಲಾಗಿತ್ತು. ಇದು ಮದ್ಯದ ಅಂಗಡಿಗಳ ಮುಂದೆ ಜನಜಂಗುಳಿ ತಪ್ಪಿಸಿತ್ತು. ಅದೇ ಸೂತ್ರವನ್ನು ದೆಹಲಿಯಲ್ಲಿ ಪಾಲಿಸಬೇಕಿತ್ತು ಎಂಬ ಮಾತುಗಳೂ ಕೇಳಿ ಬಂದಿವೆ.

# ಹರಪನಹಳ್ಳಿ: ಜನತೆಗೆ ದಂಡದ ಬಿಸಿ ಮುಟ್ಟಿಸಿದ ಅಧಿಕಾರಿಗಳು



ಹರಪನಹಳ್ಳಿ, ಏ.19- ತಾಲ್ಲೂಕಿನಲ್ಲಿ ಕೊರೊನಾ ಹಾವಳಿ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಮಾಸ್ಕ್, ಸಾಮಾಜಿಕ ಅಂತರ ಮತ್ತು ಸ್ಯಾನಿಟೈಸರ್ ಬಳಕೆ ಮಾಡುವುದನ್ನು ನಿರ್ಲಕ್ಷಿಸುತ್ತಿದ್ದು, ಅಧಿಕಾರಿಗಳು ಪಾದಯಾತ್ರೆ ಮೂಲಕ ಕೊರೊನಾ ಸೋಂಕು ಕುರಿತು ಜಾಗೃತಿ ಮೂಡಿಸಿ, ದಂಡ ವಸೂಲಿ ಮಾಡಿದರು.

ಪಟ್ಟಣದ ಮಾರುಕಟ್ಟೆ ಪ್ರದೇಶ ಹಾಗೂ ಪ್ರಮುಖ ರಸ್ತೆಗಳಲ್ಲಿ ತಹಶೀಲ್ದಾರ್ ನಂದೀಶ್ ನೇತೃತ್ವದಲ್ಲಿ ಪುರಸಭೆ ಮುಖ್ಯಾಧಿಕಾರಿ ನಾಗರಾಜನಾಯ್ಕ್, ಪಿಎಸ್ಐ ಪ್ರಕಾಶ್ ಹಾಗೂ ಇಲಾಖೆಗಳ ಸಿಬ್ಬಂದಿ ಅಂಗಡಿಗಳಿಗೆ ತೆರಳಿ, ಮಾಸ್ಕ್ ಧರಿಸಿ ವ್ಯವಹಾರ ಮಾಡುವಂತೆ ಎಚ್ಚರಿಕೆ ನೀಡಿ ದಂಡ ವಸೂಲಿ ಮಾಡಿದರು. ಕೆಲ ವ್ಯಾಪಾರಸ್ಥರು, ಗ್ರಾಹಕರು ಅಧಿಕಾರಿಗಳೊಂದಿಗೆ ವಾಗ್ವಾದ ಕೂಡ ನಡೆಸಿದರು.

ದಂಡ ಕಟ್ಟಲು ನಿರಾಕರಿಸಿದ ಅಂಗಡಿಗಳನ್ನು ಬಂದ್ ಮಾಡಲು ಸಿದ್ಧರಾಗಿದ್ದ ಅಧಿಕಾರಿಗಳ ನಡೆಯಿಂದ ಬೆಚ್ಚಿ ಬಿದ್ದ ಮಾಲೀಕರು, ದಂಡ ಕಟ್ಟಲು ಮುಂದಾದರು. ವಾಹನ ಸವಾರರು ಸೇರಿದಂತೆ ಮಾಸ್ಕ್ ಧರಿಸದ ಬಹುತೇಕ ಎಲ್ಲರಿಗೂ ಬಿಸಿ ಮುಟ್ಟಿಸಿದರು.

ತಹಶೀಲ್ದಾರ್ ಎಸ್.ಎಂ. ನಂದೀಶ್ ಮಾತನಾಡಿ, ಶನಿವಾರ, ಭಾನುವಾರ ಸಹ ರಜೆ ಪಡೆಯದೇ ಜನರ ಜೀವ ರಕ್ಷಣೆಗೆ ಕೆಲಸ ಮಾಡುತ್ತಿದ್ದೇವೆ. ಸಾರ್ವಜನಿಕರು ಸ್ಪಂದಿಸುತ್ತಿಲ್ಲ. ಎರಡನೇ ಅಲೆಯ ಕೊರೊನಾ ಸರಪಳಿಯನ್ನು ತುಂಡು ಮಾಡಲು ಸಾರ್ವಜನಿಕರ ಸಹಕಾರ ಮುಖ್ಯವಾಗಿದೆ. ಅದರ ಬಗ್ಗೆ ಇನ್ನೂ ಅರಿವು ಮೂಡದಿರುವುದು ವಿಷಾದನೀಯ. ಮುಂದಿನ ದಿನಗಳಲ್ಲಿ ಕೊರೊನಾ ತಡೆಗಟ್ಟಲು ಕಠಿಣ ಕಾನೂನು ಜರುಗಿಸಲು ಮುಂದಾಗುತ್ತೇವೆ ಎಂದರು.

ಮುಖ್ಯಾಧಿಕಾರಿ ನಾಗರಾಜನಾಯ್ಕ್ ಮಾತನಾಡಿ, ಮಾಸ್ಕ್ ಧರಿಸದ ಗ್ರಾಹಕರೊಂದಿಗೆ ವ್ಯಾಪಾರಸ್ಥರು ವ್ಯವಹಾರ ಮಾಡಬಾರದು. ಅಂಗಡಿಗಳಲ್ಲಿ ಅಂತರ ಕಾಪಾಡಿಕೊಂಡು ವ್ಯವಹಾರ ಮಾಡಬೇಕು. ಇಲ್ಲದಿದ್ದರೆ ಅಂಗಡಿ ಪರವಾನಿಗೆಯನ್ನು ರದ್ದುಪಡಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಬಿ. ಮಂಜುನಾಥ, ಕಂದಾಯ ಇಲಾಖೆಯ ಅರವಿಂದ, ಪೊಲೀಸ್ ಕೊಟ್ರೇಶ್ ಇನ್ನಿತರರು ಹಾಜರಿದ್ದರು.

# ಅಂತರ ಮರೆತ ಅಂಗಡಿಗಳಿಗೆ ದಂಡದ ಬಿಸಿ

(1ನೇ ಪುಟದಿಂದ) ಸಾಮಾಜಿಕ ಅಂತರ ಇರದೇ ಗುಂಪು ಕಟ್ಟಿಕೊಂಡು ಬಂದಿದ್ದೀರಿ. ನಾವು ದಂಡ ಕಟ್ಟುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದುದೂ ಕಂಡು ಬಂತು.

**ವಾದಿಸಿದರೆ ಕೇಸ್ :** ಸಾಮಾಜಿಕ ಅಂತರ ನಿಭಾಯಿಸದೇ ಅಂಗಡಿ ನಡೆಸುತ್ತಿರುವವರು ದಂಡ ಕಟ್ಟಲು ನಿರಾಕರಿಸಿದರೆ ಅಂಥವರ ಮೇಲೆ ಕೇಸ್ ಹಾಕಿ ಎಂದು ಖಡಕ್ ಸೂಚನೆ ನೀಡಿದ ಜಿಲ್ಲಾಧಿಕಾರಿ ಬೀಳಗಿ, ಪರಿಸ್ಥಿತಿ ಇದೇ ರೀತಿ ಮುಂದುವರೆಸಿದರೆ ಕೊನೆಗೆ ಅಂಗಡಿಗಳನ್ನೇ ಬಂದ್ ಮಾಡುವ ಸ್ಥಿತಿ ಬರಬಹುದು ಎಂದು ಎಚ್ಚರಿಸಿದ್ದಾರೆ.

**ದೇವಸ್ಥಾನದಲ್ಲೂ ಅಂತರವಿಲ್ಲ :** ಕಾಳಿಕಾಂಬ ದೇವಾಲಯಕ್ಕೆ ತೆರಳಿದ ಜಿಲ್ಲಾಧಿಕಾರಿ ಬೀಳಗಿ, ಅಲ್ಲಿ ಗುಂಪಾಗಿ ಕುಳಿತಿದ್ದ ಮಹಿಳೆಯರಿಗೆ ಸಾಮಾಜಿಕ ಅಂತರದ ಬಗ್ಗೆ ತಿಳಿ ಹೇಳಿದರಲ್ಲದೇ, ಅವರಿಗೆ ಮಾಸ್ಕ್ ತರಿಸಿಕೊಟ್ಟರು.

ಈ ಸಂದರ್ಭದಲ್ಲಿ ಎಸ್ಪಿ ಹನುಮಂತರಾಯ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ವಿಜಯಲಕ್ಷ್ಮಿ ರಸ್ತೆಯಲ್ಲಿರುವ ಬೆಳ್ಳಿ-ಬಂಗಾರದ ಅಂಗಡಿ ಮಾಲೀಕರು ಹಾಗೂ ಸಿಬ್ಬಂದಿಗಳಿಗೆ ಕೊರೊನಾ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು.

# ಜಿ.ಪಂ., ತಾ.ಪಂ.ಚುನಾವಣೆ ಮುಂದೂಡಲು ನಿರ್ಧಾರ

(1ನೇ ಪುಟದಿಂದ) ಬರೆದು, ಚುನಾವಣೆ ಮುಂದೂಡುವಂತೆ ಮನವಿ ಮಾಡುವುದಾಗಿ ಹೇಳಿದರು.

ಏಪ್ರಿಲ್ - ಮೇ ತಿಂಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಅವಧಿ ಪೂರ್ಣಗೊಳ್ಳುತ್ತದೆ. ಪೂರ್ಣಗೊಳ್ಳುತ್ತಿರುವ ಈ ಸ್ಥಳೀಯ ಸಂಸ್ಥೆಗಳಿಗೆ ಮೇ ಅಂತ್ಯದಲ್ಲಿ ಚುನಾವಣೆ ನಡೆಸಬೇಕು. ಆದರೆ, ಚುನಾವಣೆ ನಡೆಸುವ ಸ್ಥಿತಿಯಲ್ಲಿ ಸರ್ಕಾರವೂ ಇಲ್ಲ, ಜನರಲ್ಲಿಯೂ ಈ ಬಗ್ಗೆ ಆಸಕ್ತಿ ಇಲ್ಲ. ಜನರ ಆರೋಗ್ಯ ಕಾಪಾಡುವುದು ಮುಖ್ಯವಾಗಿದೆ. ಸೋಂಕು ನಿಯಂತ್ರಣಕ್ಕೆ ಬಂದ ನಂತರ ಚುನಾವಣೆ ಮಾಡೋಣ ಎಂದರು.

ಕಳೆದ ವರ್ಷ ಪಂಚಾಯ್ತಿ ಚುನಾವಣೆಗಳನ್ನು ಮುಂದೂಡಲಾಗಿತ್ತು. ರಾಜ್ಯದಲ್ಲಿ ನಡೆದ ಉಪ ಚುನಾವಣಾ ಸಂದರ್ಭದಲ್ಲಿ ಸೋಂಕು ವ್ಯಾಪಕವಾಗಿ ಹರಡಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ, ಅವರ ಸಂಪುಟದ ಸಹೋದ್ಯೋಗಿಗಳು ಹಾಗೂ ರಾಜಕೀಯ ಪಕ್ಷದ ಪ್ರಮುಖರಿಗೆ ಸೋಂಕು ತಗುಲಿದೆ. ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಸರ್ಕಾರ ಚುನಾವಣೆ ಮುಂದೂಡಲು ತೀರ್ಮಾನ ಕೈಗೊಳ್ಳಲಿದೆ ಎಂದರು.

ನಾಲೆ, ಕಲ್ಯಾಣಿ, ಗೋಕಟ್ಟೆ ಅಭಿವೃದ್ಧಿಗೆ ನಿರ್ಧಾರ, ನರೇಗಾದಡಿ ಈ ಕಾರ್ಯಕ್ರಮ ನಡೆಸುತ್ತೇವೆ. ಮಳೆ ನೀರನ್ನು ಭೂಮಿಯಲ್ಲಿ ಇಂಗಿಸುವ ಕೆಲಸ ಮಾಡುತ್ತೇವೆ. ಇದರ ಬಗ್ಗೆ ಟಾರ್ಗೆಟ್ ಕೂಡ ಕೊಟ್ಟಿದ್ದೇವೆ, ಕೆರೆ ಅಭಿವೃದ್ಧಿಯನ್ನು ಗ್ರಾಮ ಪಂಚಾಯ್ತಿಗೆ ಕೊಡುತ್ತೇವೆ ಎಂದರು.

ಗ್ರಾಮ ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಮಾಡಿದ್ದೆವು, ಕೋವಿಡ್ ಹಿನ್ನೆಲೆಯಲ್ಲಿ ಟಾಸ್ಕ್ ಫೋರ್ಸ್ ಮಾಡಿದ್ದೆವು, ಹಿಂದೆ ಈ ಕಾರ್ಯಕ್ರಮ ಯಶಸ್ವಿಯಾಗಿತ್ತು, ಈಗಲೂ ಅದನ್ನು ಮುಂದುವರೆಸುತ್ತೇವೆ ಎಂದರು.

# ಎಸ್.ಕೆ. ವೀರಣ್ಣ ಬ್ಯಾಂಕ್ ಉಪಾಧ್ಯಕ್ಷ

(1ನೇ ಪುಟದಿಂದ) ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಎ. ಮುರುಗೇಶ್, ಎಸ್.ಕೆ. ವೀರಣ್ಣ ಅವರನ್ನು ಅಭಿನಂದಿಸಿದರಲ್ಲದೇ, ಬ್ಯಾಂಕಿನ ಅಭಿವೃದ್ಧಿಗೆ ಶ್ರಮಿಸುತ್ತಿರುವ ವೀರಣ್ಣ ಅವರ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ಯಾಂಕಿನ ನಿರ್ದೇಶಕರುಗಳಾದ ಎ.ಹೆಚ್. ಕುಬೇರಪ್ಪ, ಶಂಕರ್ ಖಟಾವ್ ಕರ್, ಎಸ್.ಕೆ. ಪ್ರಭು ಪ್ರಸಾದ್, ಶ್ರೀಮತಿ ಶಶಿಕಲಾ ರುದ್ರಯ್ಯ, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ.ನಾಗೇಂದ್ರಚಾರಿ, ಕೆ. ಹೆಚ್. ಶಿವಯೋಗಪ್ಪ, ಶ್ರೀಮತಿ ಅನಿಲ ಇಂದೂಧರ್ ನಿಶಾನಿಮಠ, ಆರ್.ವಿ. ಶಿರಸಾಲಿಮಠ್, ಕಿರಣ್ ಶೆಟ್ಟಿ, ವಿಶೇಷ ಆಹ್ವಾನಿತರಾದ ಜಿ.ಕೆ. ವೀರಣ್ಣ, ಶ್ರೀಮತಿ ಉಮಾ ವಾಗೇಶ್, ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಕೆ.ಎಂ. ಬಸವರಾಜ್, ಶ್ರೀಮತಿ ಜೆ.ಸಿ. ವಸುಂಧರಾ, ಶ್ರೀಮತಿ ಕೆ.ಎಂ. ಶೈಲಾ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಪಕ ಎಂ. ಶಿವಲಿಂಗಸ್ವಾಮಿ ಅವರು ಸಭೆಯ ಕಾರ್ಯಕಲಾಪವನ್ನು ನಿರ್ವಹಿಸಿದರು.

# ನಿಘಂಟು ತಜ್ಞ ವೆಂಕಟಸುಬ್ಬಯ್ಯ ನಿಧನ

(1ನೇ ಪುಟದಿಂದ) ಪ್ರಾಧ್ಯಾಪಕರು. ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸುವರ್ಣ ಪದಕದೊಡನೆ ಎಂ.ಎ. ಪದವಿ, ನಂತರ ಬಿ.ಟಿ. ಪದವಿ ಪಡೆದಿದ್ದರು. ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿಯನ್ನು ಆರಂಭಿಸಿ, ನಂತರ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಕೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಅಖಿಲ ಕರ್ನಾಟಕ ವ್ಯಾಪ್ತಿಯನ್ನು ತಂದುಕೊಟ್ಟ ಹಿರಿಮೆ ಅವರದ್ದು.

ನಡೆದಾಡುವ ನಿಘಂಟು, ಶಬ್ಧ ಬ್ರಹ್ಮ ಎಂದು ಜನಜನಿತರಾಗಿರುವ ವೆಂಕಟಸುಬ್ಬಯ್ಯ ಸಾಹಿತ್ಯ ವಿಮರ್ಶೆ, ಸಂಶೋಧನೆ, ಅನುವಾದ, ನಿಘಂಟು ರಚನೆ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಕೆ. 50 ಪುಸ್ತಕಗಳನ್ನು, 14 ನಿಘಂಟುಗಳನ್ನು ಪ್ರಕಟಗೊಳಿಸಿರುವುದಲ್ಲದೆ 'ಇಗೋ ಕನ್ನಡ' ಎಂಬ ಅಂಕಣದಿಂದ ನಾಡಿನಲ್ಲಿ ಮನೆಮಾತಾಗಿದ್ದರು.

# ರೇಣುಕಾಚಾರ್ಯ ಆಸ್ಪತ್ರೆಗೆ ದಾಖಲು

(1ನೇ ಪುಟದಿಂದ) ಹೊನ್ನಾಳಿಯ ನಿವಾಸದಲ್ಲೇ ಹೋಂ ಐಸೋಲೇಷನ್ ಆಗಿ ಚಿಕಿತ್ಸೆ ಪಡೆಯುತ್ತಿದ್ದರು. ಇಂದು ಆರೋಗ್ಯದಲ್ಲಿ ಏರುಪೇರು ಆಗಿದ್ದು, ಸ್ವಲ್ಪ ಮೈ ಕೈ ನೋವು, ಸ್ವಲ್ಪ ಸುಸ್ತು ಇದ್ದ ಕಾರಣ ಪರೀಕ್ಷೆಗೆ ಒಳಪಟ್ಟಾಗ ವೈದ್ಯರ ಸಲಹೆಯಂತೆ ಆಸ್ಪತ್ರೆಗೆ ದಾಖಲಾಗಿದ್ದಾರೆ.

# ಮೇ 1ರಿಂದ ಲಸಿಕೆ ಮುಕ್ತ ಮುಕ್ತ

(1ನೇ ಪುಟದಿಂದ) ಪಾಲಿಸಬೇಕಿದೆ. ಕೊವಿನ್ ವೇದಿಕೆಯಲ್ಲಿ ನೋಂದಣಿಯಿಂದ ಹಿಡಿದು ಅಡ್ಡ ಪರಿಣಾಮಗಳ ವರದಿಯವರೆಗೆ ಮಾರ್ಗಸೂಚಿಗಳನ್ನು ಪಾಲಿಸಬೇಕಿದೆ.

ಆದರೆ, ಸಂಪೂರ್ಣ ಸಿದ್ಧವಾಗಿ ಆಮದಾಗುವ ಲಸಿಕೆಗಳನ್ನು ಸರ್ಕಾರೇತರ ಮಾರ್ಗಗಳ ಮೂಲಕವೇ ವಿತರಿಸಲಾಗುವುದು. ಕೇಂದ್ರ ಸರ್ಕಾರ ತನ್ನ ಪಾಲಿನ ಲಸಿಕೆಗಳನ್ನು ಕೊರೊನಾ ಪ್ರಕರಣಗಳು ಹಾಗೂ ತ್ವರಿತವಾಗಿ ಲಸಿಕೆ ಒದಗಿಸುವ, ಲಸಿಕೆ ಪೋಲು ಕಡಿಮೆ ಮಾಡುವ ಮತ್ತಿತರೆ ಮಾನದಂಡಗಳ ಮೇಲೆ ರಾಜ್ಯಗಳಿಗೆ ವಿತರಿಸಲಿದೆ. ಈಗಾಗಲೇ ಮೊದಲ ಡೋಸ್ ಲಸಿಕೆ ಪಡೆದವರಿಗೆ, ಎರಡನೇ ಡೋಸ್ ಲಸಿಕೆ ನೀಡಲು ಹೆಚ್ಚಿನ ಆದ್ಯತೆ ನೀಡಲಾಗುವುದು. ಲಸಿಕೆ ನೀಡುವ ಅಭಿಯಾನ ಮಾರ್ಗಸೂಚಿಗಳನ್ನು ಕಾಲ ಕಾಲಕ್ಕೆ ಪರಿಷ್ಕರಿಸಲಾಗುವುದು.

# ವಾಮದೇವಪ್ಪನವರ ಗೆಲುವು ನಿಶ್ಚಿತ

## ಬಾ.ಮ. ಬಸವರಾಜಯ್ಯ



ಹರಿಹರ, ಏ.19- ಜಿಲ್ಲೆಯಲ್ಲಿ ಕನ್ನಡದ ಉಳಿವಿಗಾಗಿ ಮತ್ತು ಬೆಳವಣಿಗೆಯ ಪರವಾಗಿ ಅನೇಕ ವರ್ಷಗಳಿಂದ ಸೇವೆ ಮಾಡುತ್ತಾ ಬಂದಿರುವ ಬಿ. ವಾಮದೇವಪ್ಪನವರು ಹೆಚ್ಚಿನ ಬಹುಮತದಿಂದ ಗೆಲ್ಲುತ್ತಾರೆ ಎಂದು ಹಿರಿಯ ಸಾಹಿತಿ ಬಾಮ ಬಸವರಾಜಯ್ಯ ಹೇಳಿದರು.

ಇಲ್ಲಿನ ವಿದ್ಯಾನಗರದ ಐರಣಿ ಹೊಳೆ ಶಾಖಾ ಮಠದ ಆವರಣದಲ್ಲಿ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತನ್ನು ಸರ್ವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಬೆಳೆಸುವುದರ ಬಗ್ಗೆ ಅಪಾರವಾದ ಶ್ರದ್ಧೆ, ಕಾಳಜಿ ಮತ್ತು ಬದ್ಧತೆಯನ್ನು ಹೊಂದಿರುವ ಹಾಗೂ ಕನ್ನಡ ಭಾಷೆ, ಜ್ವಲಂತ ಸಮಸ್ಯೆಗಳ ಬಗ್ಗೆ ಅರಿವನ್ನು, ಸಾಹಿತಿಗಳ ಒಡನಾಟ, ಕನ್ನಡ ಪರ ಸಂಘಟನೆಗಳೊಂದಿಗೆ ಪ್ರೀತಿಯ ಸಂಬಂಧ ಇಟ್ಟುಕೊಂಡಿರುವುದರ ಜೊತೆಗೆ ಶೈಕ್ಷಣಿಕ, ಸಾಹಿತ್ಯ, ಸಾಂಸ್ಕೃತಿಕ, ಸಾಮಾಜಿಕ ಸೇವೆಯನ್ನು ಮಾಡುತ್ತಾ ಬಂದಿರುವ ಬಿ. ವಾಮದೇವಪ್ಪ ಅವರು ಈ ಬಾರಿ ನಡೆಯುವ ಚುನಾವಣೆಯಲ್ಲಿ ಅಧಿಕ ಮತಗಳನ್ನು ಪಡೆದು ಜಯ ಗಳಿಸುತ್ತಾರೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಬಿ. ವಾಮದೇವಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ಜಾತಿ, ಧರ್ಮ, ಪಕ್ಷಕ್ಕೆ ಸೀಮಿತವಾಗಿಲ್ಲ. ಮಾನವ ಜಾತಿ ಒಂದೇ ಎಂದು ಎಲ್ಲರನ್ನೂ ಒಗ್ಗೂಡಿಸಿ ಕನ್ನಡದ ಬೆಳವಣಿಗೆಗೆ ಸಾಹಿತ್ಯ ಪರಿಷತ್ತು ಕೆಲಸ ಮಾಡಿಕೊಂಡು ಬಂದಿದೆ ಎಂದರು.

ಜಿಲ್ಲೆಯಲ್ಲಿ ನಾನು ಮುಖ್ಯ ಶಿಕ್ಷಕರಾಗಿ, ಎರಡು ಬಾರಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷರಾಗಿ ಸೇವೆ ಮಾಡುತ್ತಾ ಬಂದಿದ್ದು, ದಾವಣಗೆರೆ ನಗರದಲ್ಲಿ ಸುಮಾರು 87 ದತ್ತಿ ಕಾರ್ಯಕ್ರಮಗಳನ್ನು ಮಾಡಿದ್ದು, ಜೊತೆಗೆ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುವುದಕ್ಕೆ ಎಲ್ಲಾ ರೀತಿಯ ಸಿದ್ಧತೆ ಕೂಡ ಮಾಡಲಾಯಿತು. ಆದರೆ ಅದು ಇನ್ನೂ ಕೈಗೂಡುವ ಹಂತದಲ್ಲಿ ಇದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಬೆಳ್ಳೂಡಿ ರಾಮಚಂದ್ರಪ್ಪ, ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಕ.ಸಾ.ಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ಎಸ್.ಹೆಚ್. ಹೂಗಾರ, ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಬೆಳ್ಳೂಡಿ ರಾಮಚಂದ್ರಪ್ಪ, ಬಿ. ರೇವಣಸಿದ್ದಪ್ಪ, ಹೆಚ್.ಕೆ. ಕೊಟ್ರಪ್ಪ, ಸಿ.ವಿ. ಪಾಟೀಲ್, ಭಿಕ್ಷಾವರ್ತಿ ಮಠ್, ಸಿ. ಎನ್. ಹುಲುಗೇಶ್, ಸುಬ್ರಮಣ್ಯ ನಾಡಿಗರ್, ಯೋಗೀಶ್ ಪಾಟೀಲ್, ಖಲೀಂಬಾಷಾ, ಡಿ.ಎಂ. ಮಂಜುನಾಥಯ್ಯ, ವಿ.ಬಿ. ಕೊಟ್ರೇಶ್, ಬಿ.ಬಿ. ರೇವಣ್ಣನಾಯ್ಕ್, ರುದ್ರಗೌಡ, ಈಶಪ್ಪ ಬೂದಿಹಾಳ ಎನ್, ಇ. ಸುರೇಶ್, ಪತ್ರಕರ್ತರಾದ ಚಿದಾನಂದ ಕಂಚಿಕೇರಿ, ಸದಾನಂದ ಕುಂಬಳೂರು, ಮುನಿರಾಜ್, ಜಿಗಳಿ ಮಂಜುನಾಥ್, ಎಂ.ವಿ. ಹೊರಿಕೇರಿ, ಕುಂದೂರು ಮಂಜಪ್ಪ ಸಿರಿಗೆರೆ, ನಾಗರಾಜ್ ಬಿರ್ಲಾ ಇತರರಿದ್ದರು.

# ಅಕ್ರಮ ಸಾಗಾಟ : 150 ಕ್ವಿಂಟಾಲ್ ಅಕ್ಕಿ ವಶ; ಇಂದು ಬಹಿರಂಗ ಹರಾಜು



ಹರಿಹರ, ಏ.19- ಅಕ್ರಮವಾಗಿ ಸಾಗಿಸುತ್ತಿದ್ದ 150 ಕ್ವಿಂಟಾಲ್ ಅಕ್ಕಿಯನ್ನು ಆಹಾರ ಶಿರಸ್ತೇದಾರ್ ಹಾಗೂ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಂಡಿದ್ದಾರೆ. ಅಕ್ರಮ ಅಕ್ಕಿಯನ್ನು ನಾಳೆ ದಿನಾಂಕ 20 ರಂದು ಬೆಳಿಗ್ಗೆ 11 ಗಂಟೆಗೆ ಎಪಿಎಂಸಿ ಆವರಣದಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಗೋದಾಮಿನಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಷರತ್ತುಗಳಿಗೆ ಬದ್ಧರಾಗಿ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಆಹಾರ ಇಲಾಖೆ ಅಧಿಕಾರಿ ರಮೇಶ್ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ 199 ಜನರಿಗೆ ಸೋಂಕು

(1ನೇ ಪುಟದಿಂದ) ಆರು ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 42 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 754ಕ್ಕೆ ಏರಿಕೆಯಾಗಿದೆ.

## ಎಂ.ಬಿ. ಬಸವರಾಜಪ್ಪನವರು ನಿಧನ



ಕಾಲೇಜು ರಸ್ತೆ, ನಿಟುವಳ್ಳಿ, ದಾವಣಗೆರೆ ವಾಸಿಯಾದ **ಎಂ.ಬಿ. ಬಸವರಾಜಪ್ಪ** (64) ಇವರು ದಿನಾಂಕ : 19.4.2021ರ ಸೋಮವಾರ ಮಧ್ಯಾಹ್ನ 12.10 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, 3 ಜನ ಗಂಡು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 20.04.2021ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಮೃತರ ಸ್ವಂತ ಜಮೀನಿನಲ್ಲಿ (ಭೂಮಿಕ ನಗರದಲ್ಲಿ) ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗದವರು**

99016 47874, 90665 83583

## ಗೋಪನಾಳ್ ಅಜಯ್ ಓ. ನಿಧನ



ದಾವಣಗೆರೆ ತಾಲ್ಲೂಕು ಗೋಪನಾಳು ಗ್ರಾಮದ ವಾಸಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಅಜಯ್ ಓ. (51) ಇವರು ದಿನಾಂಕ 19.04.2021ರ ಸೋಮವಾರ ಸಂಜೆ 5.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.04.2021 ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಗೋಪನಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ಅಧಿಕಾರಿಗಳ ಕಣ್ತಪ್ಪಿಸಿ ಓಡಾಡುತ್ತಿರುವ ಸಾರಿಗೆ ನೌಕರರು!

ದಾವಣಗೆರೆ, ಏ.19- ಸರ್ಕಾರಿ ನೌಕರ ರೆಂದು ಪರಿಗಣನೆ, 6ನೇ ವೇತನ ಆಯೋಗ ಜಾರಿಗೆ ಒತ್ತಾಯಿಸಿ ಸಾರಿಗೆ ನೌಕರರು ಹೋರಾಟ ನಡೆಸುತ್ತಿರುವ ಹಿನ್ನೆಲೆಯಲ್ಲಿ ಸಾರಿಗೆ ನಿಗಮದ ಬೆರಳೆಣಿಕೆಯಷ್ಟು ನೌಕರರು ಮಾತ್ರ ದಿನದಿಂದ ದಿನಕ್ಕೆ ಹಂತ ಹಂತವಾಗಿ ಕೆಲಸಕ್ಕೆ ಹಾಜರಾಗುತ್ತಿದ್ದಾರೆ.

ಈ ಮಧ್ಯೆ ದಾವಣಗೆರೆ ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿಗಳು ತಮ್ಮ ನೌಕರರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಚಾಲಕರು ಮತ್ತು ನಿರ್ವಾಹಕರ ವಿಳಾಸ ಪಡೆದು ಅವರ ಮನೆಗಳಿಗೆ ತೆರಳುತ್ತಿರುವ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗುವಂತೆ ಮನವೊಲಿಸಲು ಪ್ರಯತ್ನಿಸಿದ್ದಾರೆ.

ಅದಕ್ಕೂ ಒಪ್ಪದಿದ್ದಲ್ಲಿ ಒತ್ತಾಯ ಪೂರ್ವಕವಾಗಿ ನೌಕರರನ್ನು ಕರ್ತವ್ಯಕ್ಕೆ ಹಾಜರಾಗುವಂತೆ ಸೂಚನೆ ನೀಡುತ್ತಿದ್ದಾರೆ ಎನ್ನಲಾಗಿದೆ. ಆದರೆ, ಅಧಿಕಾರಿಗಳು ಮನೆಗಳಿಗೆ ಬರುವ ಮಾಹಿತಿ ಪಡೆದಿರುವ ಸಿಬ್ಬಂದಿಗಳು ತಮ್ಮ ಮೇಲಾಧಿಕಾರಿಗಳು ಮನೆಗೆ ಬರುವ ಮೊದಲೇ ಮನೆಯಿಂದ ಹೊರಹೋಗುವ ಮೂಲಕ ಅಧಿಕಾರಿಗಳ ಕಣ್ತಪ್ಪಿಸಿ ಓಡಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಸದ್ಯ ಮನೆಗೆ ತೆರಳಿದರೂ ನೌಕರರು ಸಿಗದ ಕಾರಣ, ಅಧಿಕಾರಿಗಳು ಅವರು ಇರುವ ಸ್ಥಳದ ಬಗ್ಗೆ ಮಾಹಿತಿ ಪಡೆದು ಹುಡುಕಾಟದಲ್ಲಿ ತೊಡಗಿದ್ದಾರೆ ಎನ್ನಲಾಗಿದೆ. ಒಟ್ಟಿನಲ್ಲಿ ನೌಕರರು - ಸರ್ಕಾರದ ನಡುವಿನ ಈ ಜಟಾಪಟಿ ಯಾವ ಹಂತಕ್ಕೆ ತಲುಪುತ್ತದೋ ಕಾದು ನೋಡಬೇಕಿದೆ.

**ನಾಲ್ಕು ಕೋಟಿ ನಷ್ಟ :** ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳು ಮುಷ್ಕರ ಪ್ರಾರಂಭ ಮಾಡಿದಾಗಿನಿಂದ ದಾವಣಗೆರೆ ಡಿಪೋ, ಹೊನ್ನಾಳಿ ಮತ್ತು ಹರಿಹರದ ಡಿಪೋಗಳಿಗೆ ಇದುವರೆಗೂ ಸುಮಾರು ನಾಲ್ಕು ಕೋಟಿ ರೂ.ಗಳಷ್ಟು ನಷ್ಟ ಉಂಟಾಗಿದೆ ಎಂದು ಕೆಎಸ್‌ಆರ್‌ಟಿಸಿ ಡಿಸಿ ಸಿದ್ದೇಶ್ ಹೆಬ್ಬಾಳ್ ತಿಳಿಸಿದರು.

ಸೋಮವಾರ ಸುಮಾರು 50ಕ್ಕೂ ಹೆಚ್ಚು ಬಸ್‌ಗಳು ಸಂಚಾರ ಮಾಡಿದ್ದು, 70 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸಿದ್ದಾರೆ. ಭಾನುವಾರ ಈ ಸಂಖ್ಯೆಯಲ್ಲಿ ವೃದ್ಧಿ ಕಂಡಿತ್ತು. ನಾಳೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳು ಬರುವ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಸೋಮವಾರ ಹುಬ್ಬಳ್ಳಿ, ಬೆಂಗಳೂರು, ರಾಣೇಬೆನ್ನೂರು, ಹೊಸಪೇಟೆ, ಶಿವಮೊಗ್ಗ, ಚಿತ್ರದುರ್ಗ, ಹರಪನಹಳ್ಳಿ, ಹರಿಹರಕ್ಕೆ ಬಸ್‌ಗಳು ತೆರಳಿದವು.

ಕೆಎಸ್‌ಆರ್‌ಟಿಸಿ ನೌಕರರು ತಮ್ಮ ಬೇಡಿಕೆ ಗಳ ಈಡೇರಿಗೆ ಒತ್ತಾಯಿಸಿ ಸೋಮವಾರ ಹಮ್ಮಿಕೊಂಡಿದ್ದ ಜೈಲು ಭರೋ ಚಳುವಳಿ, ಉಪ ವಾಸ ಸತ್ಯಾಗ್ರಹವನ್ನು ದಾವಣಗೆರೆ ಡಿಪೋದ ನೌಕರರು ಹಿಂಪಡೆದು ಕರ್ತವ್ಯಕ್ಕೆ ಹಾಜರಾಗುವ ಮೂಲಕ ತಮ್ಮ ಬಸ್ಸುಗಳನ್ನು ರಸ್ತೆಗೆ ಇಳಿಸಿದ್ದಾರೆ. ಸಾರಿಗೆ ನೌಕರರು ಜೈಲು ಭರೋ ಚಳುವಳಿ ಹಿಂಪಡೆದ ಹಿನ್ನೆಲೆಯಿಂದ ಸೋಮವಾರ ಅರ್ಧದಷ್ಟು ಸಾರಿಗೆ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದರು.

ಖಾಸಗಿ ಬಸ್ಸುಗಳಿಗೆ ಹತ್ತಿದ್ದ ಪ್ರಯಾಣಿಕರು ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಕಂಡ ಕೂಡಲೇ ಅದರಿಂದ ಕೆಳಗಿಳಿದು ಅವುಗಳತ್ತ ಓಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಮಾಹಿತಿಯ ಪ್ರಕಾರ ಕೆಎಸ್‌ಆರ್‌ಟಿಸಿ ಡಿಪೋದ ಸುತ್ತಮುತ್ತ 144ನೇ ಸೆಕ್ಷನ್ ಪ್ರಕಾರ ನಿಷೇದಾಜ್ಞೆ ಜಾರಿಗೊಳಿಸಿದ್ದ ಹಿನ್ನೆಲೆ ಯಲ್ಲಿ ಯಾವುದೇ ಸಿಬ್ಬಂದಿ ಜೈಲು ಭರೋ, ಉಪವಾಸ ಸತ್ಯಾಗ್ರಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿಲ್ಲ ಎನ್ನಲಾಗಿದೆ.

# ದರೋಡೆ ಪ್ರಕರಣ ಭೇದಿಸಿದ ಪೊಲೀಸರು



ಕೊಟ್ಟೂರು, ಏ.19- ಕಳೆದ ಭಾನುವಾರ ರಾತ್ರಿಯಷ್ಟೇ ಪಟ್ಟಣದ ಬಸವೇಶ್ವರ ನಗರದ ಮಲ್ಲೇಶ್ ಹುಲ್ಮನಿ ಮನೆಗೆ ನುಗ್ಗಿ, ಮಚ್ಚು ತೋರಿಸಿ 30 ಲಕ್ಷ ರೂ.ಗಳನ್ನು ದೋಚಿಕೊಂಡು ಪರಾರಿಯಾಗಿದ್ದ ಆರೋಪಿಗಳನ್ನು ವಾರದೊಳಗೆ ಕೊಟ್ಟೂರು ಪೊಲೀಸರು ಪತ್ತೆ ಹಚ್ಚಿ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಭಾನುವಾರ ಸಂಜೆ ಇಲ್ಲಿನ ಸಿಪಿಐ ಕಚೇರಿಯಲ್ಲಿ ಈ ಸಂಬಂಧ ಸುದ್ದಿಗೋಷ್ಠಿ ನಡೆಸಿದ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲ್ಲಾ ಅದೇವತ್ ಅವರು, ಹರಪನಹಳ್ಳಿ ಡಿವೈಎಸ್ಪಿ ಹಾಲಮೂರ್ತಿರಾವ್ ನೇತೃತ್ವದಲ್ಲಿ ಕೊಟ್ಟೂರು ಸರ್ಕಲ್ ಇನ್‌ಸ್ಪೆಕ್ಟರ್ ಹೆಚ್. ದೊಡ್ಡಪ್ಪ, ಸಬ್‌ಇನ್‌ಸ್ಪೆಕ್ಟರ್ ಹೆಚ್. ನಾಗಪ್ಪ, ತನಿಖಾ ತಂಡದಲ್ಲಿದ್ದ ಎಎಸ್‌ಐಗಳಾದ ಸೈಯದ್ ಸೈಫುಲ್ಲಾ, ಸಿ. ಗಂಗಾಧರ, ಮುಖ್ಯ ಪೇದೆಗಳಾದ ಆರ್. ಬಸವರಾಜ್, ವಿ. ಮಂಜಪ್ಪ, ಹೆಚ್. ಬಸವರಾಜ್, ಪೇದೆಗಳಾದ ರೇವಣಾರಾಧ್ಯ, ಟಿ. ರಾಜೇಂದ್ರಪ್ರಸಾದ್, ಎಂ.ವಿ. ಯರ್ರಿಸ್ವಾಮಿ, ಅನಿಲ್, ಬಸವರಾಜ್, ಬಿ. ಮೂಗಣ್ಣ, ಮಾಲತೇಶ್ ಮತ್ತಿತರರು ಸೂಕ್ಷ್ಮಾದ ಈ ಪ್ರಕರಣವನ್ನು ಪತ್ತೆ ಹಚ್ಚಿ ಅತ್ಯುತ್ತಮ ಕೆಲಸ ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ ಎಂದು ತಿಳಿಸಿದರು.

ಏ. 11 ರಂದು ಪಟ್ಟಣದ ಮಲ್ಲೇಶ್ ಹುಲ್ಮನಿ ಅವರ ಮನೆಗೆ ನುಗ್ಗಿದ 6-7 ಜನರ ದರೋಡೆಕೋರರ ತಂಡ ಮಚ್ಚು ಮತ್ತು ಲಾಂಗ್‌ಗಳನ್ನು ತೋರಿಸಿ ಮನೆಯೊಳಗಿದ್ದ 30 ಲಕ್ಷ ರೂ. ನಗದು ಹಣವನ್ನು ದರೋಡೆ ಮಾಡಿಕೊಂಡು ನಾಪತ್ತೆಯಾಗಿದ್ದರು. ಈ ಹಿನ್ನೆಲೆಯಲ್ಲಿ ಅಂದಿನಿಂದಲೇ ಪ್ರಕರಣದ ತನಿಖೆ ಕೈಗೊಂಡ ಪೊಲೀಸ್ ತಂಡ, ಕೊಟ್ಟೂರು ಪಟ್ಟಣದಲ್ಲಿನ ಸಿ.ಸಿ. ಕ್ಯಾಮರಾ ಮತ್ತಿತರರುಗಳಿಂದ ಸಂಗ್ರಹಿಸಿದ ಮಾಹಿತಿ ಮೇರೆಗೆ ಬೆಂಗಳೂರಿಗೆ ತೆರಳಿ ದರೋಡೆಕೋರರ ತಂಡವನ್ನು ಬೆಂಗಳೂರು ಪೊಲೀಸರ ಸಹಕಾರದೊಂದಿಗೆ ಪತ್ತೆ ಹಚ್ಚಿ 5 ಲಕ್ಷ 17 ಸಾವಿರ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಈ ಸಂಬಂಧ ಒಂದು ಓಮಿನಿ ವ್ಯಾನು, ಒಂದು ಇನ್ನೋವಾ ಕಾರು ಹಾಗೂ ಒಂದು ಇಂಡಿಕ ಕಾರಗಳನ್ನು ವಶಪಡಿಸಿಕೊಂಡಿದ್ದಾರೆ.

# ಇನ್ನೂ ಆರಂಭವಾಗದ ಕೆರೆಗೆ ನೀರು ತುಂಬಿಸುವ ಕಾರ್ಯ



**ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬೆಳಗುತ್ತಿ ಉಮೇಶ್**

ಹೊನ್ನಾಳಿ, ಏ.19- ಶಾಸಕ ರೇಣುಕಾಚಾರ್ಯರು ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾರ್ಯವನ್ನು ಆರಂಭಿಸಿಲ್ಲ. ಮುಂದಿನ ದಿನಗಳಲ್ಲಿ ಕೆರೆಗೆ ನೀರು ತುಂಬಿಸುವುದನ್ನು ಚುನಾವಣಾ ವಿಷಯವಾಗಿಸುವರೇನೋ ಎಂದು ನ್ಯಾಮತಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬೆಳಗುತ್ತಿ ಉಮೇಶ್ ವ್ಯಂಗ್ಯವಾಡಿದರು.

ಅವರು ಸಂಘದ ವತಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿರುವ ರೈತ ಭವನದಲ್ಲಿ ಆಯೋಜಿಸಲಾಗಿದ್ದ ಹಿರಿಯ ರೈತ ಪರ ಹೋರಾಟಗಾರರ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಇತರೆ ತಾಲ್ಲೂಕುಗಳಲ್ಲಿ ಕೆರೆಗೆ ನೀರು ತುಂಬಿಸುವ ಕಾರ್ಯ ಪ್ರಗತಿಯಲ್ಲಿದ್ದು, ನಮ್ಮ ತಾಲ್ಲೂಕಿನಲ್ಲಿ ಈ ಕಾರ್ಯ ಆರಂಭಿಸದಿರುವುದು ಬೇಸರದ ಸಂಗತಿ. ಶಾಸಕರು ಈ ಕಾರ್ಯಕ್ಕೆ ಮುಂದಾಗದಿದ್ದರೆ, ಅವರ ಮನೆ ಮುಂದೆ ಹೋರಾಟ ಮಾಡಬೇಕಾಗುತ್ತದೆ ಎಂದರು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಉಪಾಧ್ಯಕ್ಷ ದೊಡ್ಡೇರಳ್ಳಿ ಎಚ್. ನಾಗರಾಜಪ್ಪ ಮಾತನಾಡಿ, ಇಂದಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅವೈಜ್ಞಾನಿಕ ಕೃಷಿ ನೀತಿಗಳಿಂದಾಗಿ ರೈತ ಸಮುದಾಯ ಒಕ್ಕಲುತನವನ್ನೇ ಕೈಬಿಡುವ ಹಂತಕ್ಕೆ ತಲುಪುತ್ತಿದೆ. ಭಾರತ ದೇಶ ಕೃಷಿ ಪ್ರಧಾನ ರಾಷ್ಟ್ರ. ಕೃಷಿ ನೀತಿಯಲ್ಲಿ ವೈಜ್ಞಾನಿಕ ನೀತಿಗಳನ್ನು ಅನುಸರಿಸಿದರೆ, ಬೇರೆ ರಾಷ್ಟ್ರಗಳಿಗೆ ಆಹಾರ ಒದಗಿಸುವ ಕ್ರಮವನ್ನು ಜಾರಿಗೆ ತಂದರೆ ದೇಶದ ರೈತರ ಆರ್ಥಿಕತೆ ದ್ವಿಗುಣಗೊಳ್ಳುತ್ತದೆ ಎಂದರು.

ಇದೇ ವೇಳೆ ರೈತಪರ ಹೋರಾಟಗಾರರಾದ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಕುಂದೂರು ಜಿ. ಹನುಮಂತಪ್ಪ, ರೈತ ಸಂಘದ ಮಾಜಿ ಅಧ್ಯಕ್ಷರು, ಹಿರಿಯ ರೈತ ಪರ ಹೋರಾಟಗಾರ ಗೋವಿನಕೋವಿ ಜಿ.ಸಿ. ಜಯಣ್ಣ, ರೈತ ಚಿಂತಕ ಗುಡ್ಡೇಹಳ್ಳಿಯ ಹನುಮಂತನಾಯ್ಕ ಅವರನ್ನು ರೈತ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಜಿ. ಹನುಮಂತಪ್ಪ, ವಿವಿಧ ರೈತ ಸಂಘಟನೆಗಳಿದ್ದು, ಇದರಿಂದ ಯಾವುದೇ ರೈತಪರ ಹೋರಾಟಗಳಿಗೆ ನಿರೀಕ್ಷಿತ ಪ್ರತಿಪಲ ಸಿಗದಂತಾಗಿದೆ. ಇದನ್ನರಿತು ಮುಂದಿನ ದಿನಗಳಲ್ಲಿ ಎಲ್ಲಾ ರೈತ ಸಂಘಟನೆಗಳು ಒಟ್ಟಾಗಿ ಇಡೀ ರಾಜ್ಯಕ್ಕೆ ಒಂದೇ ರೈತ ಸಂಘಟನೆ ರೂಪಿಸಿಕೊಂಡು ಹೋರಾಟ ನಡೆಸಬೇಕು ಎಂದು ಹೇಳಿದರು.

ಸನ್ಮಾನಿತರಾದ ಗೋವಿನಕೋವಿ ಜಯಣ್ಣ ಮಾತನಾಡಿ, ರೈತ ಮುಖಂಡರಾದವರು ಯಾವುದೇ ಕಷ್ಟಗಳಿಗೆ ಜಗ್ಗದೇ, ಹೋರಾಟ ನಡೆಸಬೇಕಾಗುತ್ತದೆ. ಹೊನ್ನಾಳಿ ತಾಲ್ಲೂಕು ಎಚ್.ಎಸ್. ರುದ್ರಪ್ಪನವರಂತಹ ರೈತ ನಾಯಕರನ್ನು ಪಡೆದ ತಾಲ್ಲೂಕು ಇದಾಗಿದ್ದು, ಈ ಹಿರಿಮೆಯನ್ನು ಎತ್ತಿ ಹಿಡಿಯುವ ಕೆಲಸ ತಾಲ್ಲೂಕಿನ ರೈತರು ಮಾಡಬೇಕು ಎಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ಹಿರೇಮಠದ ಬಸವರಾಜಪ್ಪ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಯುವಕ ವಿನಯ್‌ಕುಮಾರ್ ಅವರು ರೈತ ಸಂಘಕ್ಕೆ ಸೇರ್ಪಡೆಗೊಂಡರು. ತಾಲ್ಲೂಕು ಅಧ್ಯಕ್ಷ ಕೆ.ಸಿ. ಬಸಪ್ಪ, ಉಪಾಧ್ಯಕ್ಷ ಎಚ್.ಬಿ. ಬಸವರಾಜಪ್ಪ, ಕೆ. ಪರಮೇಶ್ವರಪ್ಪ, ಸಂಘದ ಕಾರ್ಯದರ್ಶಿ ಕರಿಬಸಪ್ಪ, ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

# ಮಾನವೀಯತೆಗಾಗಿ ಮನಮಿಡಿದ ಮಹನೀಯರು ಅಂಬೇಡ್ಕರ್



**ಆರ್.ಬಿ. ಪಾಟೀಲ್**

ದಾವಣಗೆರೆ, ಏ. 19- ಅಂಬೇಡ್ಕರ್‌ರವರು ಮಧ್ಯಪ್ರದೇಶದ ಅಂಬೇವಾಡಿ ಗ್ರಾಮದಲ್ಲಿ ಜನಿಸಿ, ಮಹಾರಾಷ್ಟ್ರದಲ್ಲಿ ಬೆಳೆದು, ಮುಂದೆ ಕಾನೂನು ತಜ್ಞರಾಗಿ ಬೆಳೆದು ಸ್ವತಂತ್ರ ಭಾರತಕ್ಕೆ ಸಂವಿಧಾನ ಕೊಟ್ಟವರು. 'ಜಗತ್ತಿನಲ್ಲಿ ಯಾವುದೂ ಅಸಾಧ್ಯವಲ್ಲ' ಎಂದು ಯುವ ಜನತೆಗೆ ತಿಳಿಸಿ, ಬಯಲೊಳಗೆ ಬದುಕು ಕಟ್ಟಿಕೊಂಡವರ ಬಂಧುವಾಗಿ, ದಮನಿತರ ನೋವಿಗೆ ಮಿಡಿದ ಕಾರುಣ್ಯ ಸಿಂಧುವಾಗಿ, ಎಲ್ಲರ ಮನದಲಿ ಸ್ವಾಭಿಮಾನವ ತುಂಬಿದವರು ಎಂದು ಆರ್.ಬಿ. ಪಾಟೀಲ್ ತಿಳಿಸಿದರು.

ಅವರು ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟಿನಲ್ಲಿ 'ಅಂಬೇಡ್ಕರ್ ಜಯಂತಿ' ಪ್ರಯುಕ್ತ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಶಿಕ್ಷಣ, ಸಂಘಟನೆ, ಸಂಘರ್ಷಕ್ಕೆ ಶಕ್ತಿ ಕೊಟ್ಟಂತವರು ಬಾಬಾ ಸಾಹೇಬ್ ಅಂಬೇಡ್ಕರ್. ಅವರು ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಜೀವನಪರ್ಯಂತ ದುಡಿದವರು ಎಂದು ಅಂಬೇಡ್ಕರ್‌ರ ಜೀವನ ಚರಿತ್ರೆಯ ಬಗ್ಗೆ ತಿಳಿಸಿದರು. ಸಂವಿಧಾನದ ಸ್ವರೂಪ, ಹಕ್ಕು ಮತ್ತು ಕರ್ತವ್ಯಗಳನ್ನು ಕುರಿತು ಪೌರ ಕಾರ್ಮಿಕರಿಗೆ ಅರಿವನ್ನುಂಟುಮಾಡಿದರು.

ಪ್ರೊ॥ ಎಂ.ಅಬ್ದುಲ್ ರೆಹಮಾನ್ ಪಾಷರವರು ವೀಡಿಯೋ ಕಾಲ್‌ನಲ್ಲಿ ಮಾತನಾಡಿದರು. ಅಧ್ಯಕ್ಷತೆಯನ್ನು ಶಿವನಕೆರೆ ಬಸವಲಿಂಗಪ್ಪ ವಹಿಸಿದ್ದರು.

# ಜಿಲ್ಲಾ ಎಸ್ಸಿ-ಎಸ್ಟಿ ಹಕ್ಕುಗಳ ಹೋರಾಟ ಸಮಿತಿಯಿಂದ ಅಂಬೇಡ್ಕರ್ ಜಯಂತಿ



ದಾವಣಗೆರೆ, ಏ. 19- ದಾವಣಗೆರೆ ಜಿಲ್ಲಾ ಎಸ್ಸಿ - ಎಸ್ಟಿ ಹಕ್ಕುಗಳ ಹೋರಾಟ ಸಮಿತಿ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಧ್ಯಕ್ಷ ಕಾ. ಆವರಗೆರೆ ವಾಸು, ಪದಾಧಿಕಾರಿಗಳಾದ ಜಿಲ್ಲಾ ಉಪಾಧ್ಯಕ್ಷರು, ರಾಜು ಕೆರೆಯಾಗಳಹಳ್ಳಿ, ಜಿಲ್ಲಾ ಉಪಾಧ್ಯಕ್ಷರು, ಜೀವನ್ ನಿಟುವಳ್ಳಿ, ಜಿಲ್ಲಾ ಸಹ ಕಾರ್ಯದರ್ಶಿ ಸಿ. ಗುರುಮೂರ್ತಿ, ಜಿಲ್ಲಾ ಸಂ. ಕಾರ್ಯದರ್ಶಿ ಮಂಜುನಾಥ ಮಳಲ್ಕೆರೆ, ಜಿಲ್ಲಾ ಉಪಾಧ್ಯಕ್ಷರು ರುದ್ರೇಶ ಮಳಲ್ಕೆರೆ, ಜಿಲ್ಲಾ ಖಜಾಂಚಿ ಅಂಜಿನಪ್ಪ ಮಳಲ್ಕೆರೆ, ಹರಿಹರ ತಾ. ಮುಖಂಡರು ಕುಮಾರನಾಯ್ಕ, ತಾ. ಮುಖಂಡರು ಸಂತೋಷ್ ದೊಡ್ಡಮನಿ, ಜಿಲ್ಲಾ ಸಹಕಾರ್ಯದರ್ಶಿ ಮಂಜುನಾಥ ದೊಡ್ಡಮನಿ, ಜಿಲ್ಲಾ ಸಹಕಾರ್ಯದರ್ಶಿ ಹೊಸಳ್ಳಿ ಮಂಜುನಾಥ, ಮಂಜುನಾಥ ಡಿ. ಹರಳಯ್ಯ ನಗರ, ಜಿಲ್ಲಾ ಸಂಚಾಲಕ ಪರಶುರಾಮ ಗುದ್ದಾಳ್, ಚೌಡೇಶ್, ಮಂಜುನಾಥ ಓಬಳಾಪುರ, ವಿಕ್ರಮ್ ದುರ್ಗಾಂಬಿಕಾ ಬಡಾವಣೆ, ದಾದು ಭಗತ್‌ಸಿಂಗ್ ನಗರ, ರಾಜಪ್ಪ ಎ.ಕೆ. ಹಟ್ಟಿ ನಿಟ್ಟುವಳ್ಳಿ, ಅಲ್ಲಾಭಕ್ಷಿ ನಿಟ್ಟುವಳ್ಳಿ, ಗಿರೀಶ್ ಭಾರತ್ ಕಾಲೋನಿ, ಪ್ರಕಾಶ್, ಮಧು, ಕಾರ್ತಿಕ, ತಿಪ್ಪೇಸ್ವಾಮಿ ಹೊನ್ನೂರು, ಮಂಜುನಾಥ ಹೊನ್ನೂರು ಇನ್ನಿತರರು ಭಾಗವಹಿಸಿದ್ದರು.

# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಉಚಿತ ತರಬೇತಿಗೆ ಅರ್ಜಿ

ದಾವಣಗೆರೆ, ಏ.19 - ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಜಿಲ್ಲಾ ಕಚೇರಿ ವತಿಯಿಂದ 2019-20ನೇ ಸಾಲಿನ ವಿಶೇಷ ಕೇಂದ್ರೀಯ ನೆರವಿನಡಿ (ಎಸ್‌ಸಿಎ ಯಿಂದ ಎಸ್‌ಸಿಎಸ್‌ಪಿ) ಜಿಲ್ಲೆಯ ಪರಿಶಿಷ್ಟ ಜಾತಿಯ ನಿರುದ್ಯೋಗ ವಿದ್ಯಾವಂತ ಯುವಕ-ಯುವತಿಯರಿಗೆ ಉಚಿತವಾಗಿ ತರಬೇತಿ ಕಾರ್ಯಕ್ರಮವನ್ನು ದಾವಣಗೆರೆಯ ಕಿಯೋನಿಕ್ಸ್ ಸಂಸ್ಥೆ ಕೇಂದ್ರದಲ್ಲಿ ಏರ್ಪಡಿಸಲಾಗಿದೆ.

ಅಕೌಂಟಿಂಗ್ ಮತ್ತು ಟ್ಯಾಲಿ, ಕಂಪ್ಯೂಟರ್ ಪ್ರೋಗ್ರಾಮರ್ ತರಬೇತಿ, ಕಾಲ್‌ಸೆಂಟರ್ ತರಬೇತಿ 50 ಅಭ್ಯರ್ಥಿಗಳಿಗೆ. ಕಂಪ್ಯೂಟರೈಸ್ಡ್ ಫ್ಯಾಷನ್ ಡಿಸೈನಿಂಗ್ ಹಾಗೂ ಟೈಲರಿಂಗ್ ತರಬೇತಿ 44 ಅಭ್ಯರ್ಥಿಗಳಿಗೆ. ಡಿಜಿಟಲ್ ಮಾರ್ಕೆಟಿಂಗ್ 110 ಜನ, ಸೈಬರ್ ಸೆಕ್ಯೂರಿಟಿ-100, ಹಾಗೂ 250 ಅಭ್ಯರ್ಥಿಗಳಿಗೆ ಆಂಡ್ರಾಯಿಡ್ ಟ್ರೈನಿಂಗ್ (ಸ್ಮಾರ್ಟ್ ಮೊಬೈಲ್ ಫೋನ್) ತರಬೇತಿ ಉಚಿತವಾಗಿ ಆಯೋಜಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿಗಳನ್ನು ಏ.9 ರಿಂದ ಅಂಬೇಡ್ಕರ್ ನಿಗಮದ ಜಿಲ್ಲಾ ಕಚೇರಿಯಲ್ಲಿ ಉಚಿತವಾಗಿ ವಿತರಿಸಲಾಗುತ್ತಿದ್ದು, ಭರ್ತಿ ಮಾಡಿದ ಅರ್ಜಿಯನ್ನು ಏ.30 ರೊಳಗೆ ಅಗತ್ಯ ಶೈಕ್ಷಣಿಕ ಅಂಕ ಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್‌ನೊಂದಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ನಂ.337/16ಎ-16 ಗಣೇಶ್ ಲೇಔಟ್ 1ನೇ ಕ್ರಾಸ್, ಪಿ.ಬಿ.ರಸ್ತೆ, ದಾವಣಗೆರೆ. ದೂರವಾಣಿ ಸಂಖ್ಯೆ: 08192-258647 ಕ್ಕೆ ಸಂಪರ್ಕಿಸಬಹುದು ಎಂದು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ದಾಸಿಮಯ್ಯ ಜಯಂತಿ ಆಚರಣೆ



ದಾವಣಗೆರೆ, ಏ. 19- ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಡಳಿತ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಆದ್ಯ ವಚನಕಾರ ದೇವರ ದಾಸಿಮಯ್ಯ ಅವರ ಜಯಂತಿಯನ್ನು, ದೇವರ ದಾಸಿಮಯ್ಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ. ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಜಿ.ಪಂ. ಉಪ ಕಾರ್ಯದರ್ಶಿ ಆನಂದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಹಾಗೂ ದಾವಣಗೆರೆ ಜಿಲ್ಲೆಯ ನೇಕಾರ ವೇದಿಕೆ ಅಧ್ಯಕ್ಷ ಪ್ರೊ. ಎಲ್. ಸತ್ಯನಾರಾಯಣ್, ಸಮುದಾಯ ಒಕ್ಕೂಟದ ಅಧ್ಯಕ್ಷ ಡಿ.ಬಸವರಾಜ ಗುಬ್ಬಿ, ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ಏಕಬೋಟೆ, ಉಪಾಧ್ಯಕ್ಷ ಬುಗಡೆ ಬೆನಕಲ್ಲಪ್ಪ, ನಿರ್ದೇಶಕರಾದ ಗಣೇಶ್ ಕ್ಷೀರಸಾಗರಿ, ಕರಿಬಸಪ್ಪ ಐರಣಿ, ಪ್ರಸನ್ನ ಕುಮಾರ್, ಟಿ.ಅಜ್ಜೇಶ್, ಪಾಲಾಕ್ಷಪ್ಪ, ರಂಗನಾಥ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ ಹಾಗೂ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

# ಸು.ಕ.ವೇದಿಕೆಯಿಂದ ಚೇತನಗೆ ಸನ್ಮಾನ



ದಾವಣಗೆರೆ,ಏ.19- ಅತಿ ಕಿರಿಯ ವಯಸ್ಸಿನಲ್ಲಿ (24) ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಚೇತನ ಆರಿಕಟ್ಟಿ ಅವರಿಗೆ ಸುವರ್ಣ ಕರ್ನಾಟಕ ವೇದಿಕೆಯಿಂದ ಅಭಿನಂದಿಸಿ, ಗೌರವಿಸ ಲಾಯಿತು.

ಕಾರ್ಯಕ್ರಮದಲ್ಲಿ ಮಹಾಪೌರ ಎಸ್.ಟಿ. ವೀರೇಶ್, ಉಪ ತಹಶೀಲ್ದಾರ್ ಬಿ.ಪಿ. ಜಗನ್ನಾಥ್, ವೇದಿಕೆ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ಓಂಕಾರಪ್ಪ, ಮಾಜಿ ಅಧ್ಯಕ್ಷ ನಾಗರಾಜ್ ದೇವರಮನಿ, ಹೆಚ್. ಪರಶುರಾಮ್, ಮಹಾಂತೇಶ್ ವಿ. ಒಣರೊಟ್ಟಿ, ಸೂರ್ಯ ಪ್ರಕಾಶ್, ಜಯಪ್ಪ, ಎಸ್.ಪಿ. ಜಗದೀಶ್, ಶಿವು, ಮಂಜುಳಮ್ಮ ಹಾಗೂ ವೇದಿಕೆಯ ಕಾರ್ಯಕರ್ತರು ಭಾಗವಹಿಸಿದ್ದರು.

# ಹರಿಹರ : ಚರಂಡಿ ಕಾಮಗಾರಿಗೆ ಚಾಲನೆ



ಹರಿಹರ, ಏ.19- ನಗರದ ದೇವಸ್ಥಾನ ರಸ್ತೆಯಲ್ಲಿ 6.50 ಲಕ್ಷ ರೂ. ವೆಚ್ಚದ ಚರಂಡಿ ಕಾಮಗಾರಿಗೆ ನಗರಸಭೆ ಸದಸ್ಯೆ ಲಕ್ಷ್ಮಿ ದುರುಗೋಜಿ ಮೋಹನ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಇಂಜಿನಿಯರ್ ಅಬ್ದುಲ್ ಹಮೀದ್, ಸುಮಲತಾ ಆನಂದ್, ಆನಂದ್ ಮೂರ್ಕಲ್, ನಾಯ್ಕ್, ಶಂಕ್ರಪ್ಪ ಇನ್ನಿತರರಿದ್ದರು.

# ಕೊಕ್ಕನೂರು ಜಾತ್ರೆ ಸೇರಿ ಎಲ್ಲಾ ಉತ್ಸವ, ಸಮಾರಂಭ ರದ್ದು

ಮಲೇಬೆನ್ನೂರು, ಏ.19 - ರಾಮನವಮಿ ದಿನದಂದು ಜರುಗುವ ಮಲೇಬೆನ್ನೂರು ಹೋಬಳಿಯ ಎಲ್ಲಾ ರಥೋತ್ಸವ, ಜಾತ್ರೆ, ಉತ್ಸವ ಹಾಗೂ ಸಮಾರಂಭಗಳನ್ನು ಕೋವಿಡ್ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆಯಂತೆ ರದ್ದು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಇದೇ ದಿನಾಂಕ 21 ರ ಬುಧವಾರ ಕೊಕ್ಕನೂರು ಆಂಜನೇಯ ಸ್ವಾಮಿ ರಥೋತ್ಸವ ಆಚರಣೆಗೆ ಷರತ್ತು ಬದ್ದ ಅನುಮತಿ ನೀಡಲಾಗಿತ್ತು. ಆದರೀಗ ಕೊರೊನಾ ಹರಡುವಿಕೆ ನಿಯಂತ್ರಣಕ್ಕೆ ಬಾರದ ಕಾರಣ ಹಿಂದಿನ ಆದೇಶವನ್ನು ಹಿಂಪಡೆದು ಯಾವುದೇ ರಥೋತ್ಸವ, ಜಾತ್ರೆ ನಡೆಸದಂತೆ ದೇವಸ್ಥಾನ ಸಮಿತಿಗೆ ಎಸ್ಪಿ ಹಾಗೂ ಹರಿಹರ ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಈ ಆದೇಶದ ಪ್ರಕಾರ ಕೊಕ್ಕನೂರು ರಥೋತ್ಸವ ಅಷ್ಟೇ ಅಲ್ಲದೇ, ಹರಳಹಳ್ಳಿ ಹೊಳೆಸಿರಿಗೆರೆ, ಕೆ.ಎನ್.ಹಳ್ಳಿ ಮತ್ತಿತರೆ ಗ್ರಾಮಗಳ ರಥೋತ್ಸವ ಹಾಗೂ ಉಚ್ಚಾಯಗಳನ್ನು ನಡೆಸಲು ಅವಕಾಶ ಇಲ್ಲ ಎನ್ನಲಾಗಿದೆ.

# ಕೂಡ್ಲಿಗಿಯಲ್ಲಿ ಎಐಎಂಡಿಎಫ್‌ನಿಂದ ಮಾಸ್ಕ್-ಕೊರೊನಾ ಕಿಟ್ ವಿತರಣೆ



ಕೂಡ್ಲಿಗಿ, ಏ.19- ಆಲ್ ಇಂಡಿಯಾ ಮುಸ್ಲಿಂ ಡೆವಲಪ್‌ಮೆಂಟ್ ಫೋರಂ ( ಎಐಎಂಡಿಎಫ್) ವತಿಯಿಂದ ಇಂದು ಕೂಡ್ಲಿಗಿಯಲ್ಲಿ ಸುಮಾರು 5,000 ಮಾಸ್ಕ್ ಹಾಗೂ ಕೊರೊನಾ ಕಿಟ್ ಸಾಮಗ್ರಿಗಳನ್ನು ನಗರದ ಸಂತೆ ಮೈದಾನ, ಕೆಎಸ್‌ಆರ್‌ಟಿಸಿ ಬಸ್ಟ್ಯಾಂಡ್, ಮುಖ್ಯ ರಸ್ತೆ ಹಾಗೂ ಎಲ್ಲಾ ಮಸೀದಿಗಳಲ್ಲಿ ಉಚಿತವಾಗಿ ಹಂಚಿಕೆ ಮಾಡಲಾಯಿತು.

ಸ್ಥಾಪಕ ರಾಷ್ಟ್ರಾಧ್ಯಕ್ಷ ಶಕೀಲ್ ಹಸನ್, ರಾಜ್ಯ ಅಧ್ಯಕ್ಷ ಕನ್ನಡ ನಜೀರ್ ಆದೇಶದ ಮೇರೆಗೆ ಕಾರ್ಯಕ್ರಮ ಮಾಡಲಾಯಿತು. ಜಿಲ್ಲಾಧ್ಯಕ್ಷ ಇಸ್ಮಾಯಿಲ್ (ಮುನ್ನ) ಮಾತನಾಡಿ, ಕೊರೊನಾ ಜಾಗೃತಿ ಮೂಡಿಸಿದರು.

ಸಂಘಟನಾ ಕಾರ್ಯದರ್ಶಿ ಸೈಯದ್ ಶುಕೂರ್, ರಾಜ್ಯ ಯುವ ಘಟಕದ ಅಧ್ಯಕ್ಷ ಮೊಹಮ್ಮದ್ ಮಾಜ್, ತಾಲ್ಲೂಕು ಅಧ್ಯಕ್ಷ ಡಾ. ಷರೀಫ್, ನಗರ ಘಟಕದ ಅಧ್ಯಕ್ಷ ಮೊಹಮ್ಮದ್ ಖಾಸಿಂ, ಯುವ ಘಟಕದ ಅಧ್ಯಕ್ಷ ಮನ್ನು, ಜಿಲ್ಲಾ ಸಂಚಾಲಕ ಅಬ್ದುಲ್ ಮಲಿಕ್, ಚಾಂದ್ ಬಾಷಾ, ಮೌಲಾ, ವಾಸಿಂ, ವರಿಸ್ ಮತ್ತು ಸಂಘಟನೆಯ ಕಾರ್ಯಕರ್ತರು ಉಪಸ್ಥಿತರಿದ್ದರು.


# ಸಾಮಾಜಿಕ ಜಾಗೃತಿ ವೇದಿಕೆಯಿಂದ ಅಂಬೇಡ್ಕರ್ ಜಯಂತಿ



ಮಲೇಬೆನ್ನೂರು, ಏ.19- ಕೊಕ್ಕನೂರು ಗ್ರಾಮದ ಆಂಜನೇಯ ಬಡಾವಣೆಯಲ್ಲಿ ರಾಷ್ಟ್ರೀಯ ಸಾಮಾಜಿಕ ಜಾಗೃತಿ ವೇದಿಕೆ ವತಿಯಿಂದ ಡಾ. ಅಂಬೇಡ್ಕರ್ ಅವರ 130 ನೇ ಹುಟ್ಟು ಹಬ್ಬವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಶಶಿ ನಾಯ್ಕ್, ರಾಷ್ಟ್ರೀಯ ಸಾಮಾ ಜಿಕ ಜಾಗೃತಿ ವೇದಿಕೆಯ ವಿದ್ಯಾರ್ಥಿ ಘಟಕದ ಹರಿಹರ ತಾಲ್ಲೂಕು ಅಧ್ಯಕ್ಷ ಶಿವುರಾಜ್, ಮಹಾಂತೇಶ್, ಮಂಜು ಮತ್ತು ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಗ್ರಾ.ಪಂ. ಸದಸ್ಯ ಎ.ಕೆ. ಬಸವರಾಜಪ್ಪ ಹಾಗೂ ವೇದಿಕೆಯ ಪದಾಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.

# ಕೊಟ್ಟೂರಿನಲ್ಲಿ ಅಂಬೇಡ್ಕರ್ ಜಯಂತಿ



ಕೊಟ್ಟೂರು, ಏ.19- ಡಾ.ಬಿ.ಆರ್.ಅಂಬೇಡ್ಕರ್ ಅವರ 130ನೇ ಜಯಂತಿಯನ್ನು ಇಲ್ಲಿನ ಸರ್ಕಾರಿ ಶಾಲೆಯಲ್ಲಿ ಆಚರಿಸಲಾ ಯಿತು. ಮುಖ್ಯ ಶಿಕ್ಷಕ ಶ್ರೀನಿವಾಸ್, ಶಿಕ್ಷಕರಾದ ವೀರಭದ್ರಪ್ಪ, ಗಡ್ಡಿ ಮಲ್ಲಿಕಾರ್ಜುನ್, ಪಾರ್ವತಿ, ಶೀತಲ, ಸಿದ್ದಲಿಂಗಸ್ವಾಮಿ ಹಾಗೂ ಮತ್ತಿತರರಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆ : ಆನ್‌ಲೈನ್ ತರಬೇತಿಗೆ ನೋಂದಣಿ

ದಾವಣಗೆರೆ, ಏ. 19- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಆನ್‌ಲೈನ್‌ನಲ್ಲಿ ನೀಡಲು ನಿರ್ಧರಿಸಲಾಗಿದೆ.

ಆಸಕ್ತರು ಇದೇ ದಿನಾಂಕ 27 ರ ಒಳಗಾಗಿ ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕರಾಮುವಿ ಕುಲಸಚಿವ ಡಾ. ಎ. ಖಾದರ್‌ಪಾಷ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಅಲ್ಲಮಪ್ರಭು ಅವರದು ವಿರಳ, ಚಿಕಿತ್ಸಕ ವ್ಯಕ್ತಿತ್ವ

## ಅಲ್ಲಮ ಪ್ರಭುದೇವರ ಸ್ಮರಣೆ, ರಾಜ್ಯಮಟ್ಟದ ಕವಿಗೋಷ್ಠಿಯಲ್ಲಿ ಮುರುಘಾ ಶರಣರು



ಚಿತ್ರದುರ್ಗ, ಏ. 19- ಅಲ್ಲಮಪ್ರಭು ಎಂದರೆ ನಾಡು ಕಂಡಂತಹ ವಿರಳ ಮತ್ತು ಚಿಕಿತ್ಸಕ ವ್ಯಕ್ತಿತ್ವ. ಆತನ ಬುದ್ಧಿಯು ಒರೆಗಲ್ಲಿಗೆ ತೀಡಿ ತಿಕ್ಕಿ ಅದರಲ್ಲಿ ಪಾಸಾದಾಗ ಒಪ್ಪಿಕೊಳ್ಳುವ ಜಾಯಮಾನ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ನಡೆದ ಅಲ್ಲಮ ಪ್ರಭುದೇವರ ಸ್ಮರಣೆ, ಭಾರತೀಯ ನೂತನ ವರ್ಷಾರಂಭ, ಯುಗಾದಿ ಹಬ್ಬದ ರಾಜ್ಯಮಟ್ಟದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು. ಅಲ್ಲಮಪ್ರಭು ಅವನೊಬ್ಬ ಪರೀಕ್ಷಕ. ಒಳಹೊಕ್ಕು ನೋಡುವವನು. ಆತನದು ಸಾಧನ ಮಾರ್ಗ ಎಂದರು.

ಅಂತರಂಗದ ಅನಾವರಣ ಕೃತಿ ಕುರಿತು ಮಾತನಾಡಿದ ದೂರದರ್ಶನ ವಾರ್ತಾ ವಾಚಕ ಡಾ. ನೂರ್‌ಸಮದ್ ಅಬ್ಬಲಗೆರೆ, ಕನ್ನಡಕ್ಕೆ 2500 ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ. ಆದರೂ ಕನ್ನಡದ ಉಳಿವಿಗಾಗಿ ಹೋರಾಟ ಮಾಡುತ್ತಿದ್ದೇವೆ. ಒಂದು ಭಾಷೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ಭಾಷೆಯನ್ನು ಚೆನ್ನಾಗಿ ಕಲಿತುಕೊಂಡಿರಬೇಕು ಎಂದರು.

ಹುಮನಾಬಾದ್‌ನ ಖ್ಯಾತ ಸಾಹಿತಿ ಡಾ. ಗವಿಸಿದ್ದಪ್ಪ ಎಚ್. ಪಾಟೀಲ ಮಾತನಾಡಿದರು.

ಕಾರ್ಯಕ್ರಮದಲ್ಲಿ 2019ರ ರಾಜ್ಯಮಟ್ಟದ ಕವಿಗೋಷ್ಠಿಯ ಕವಿತೆಗಳ ಸಂಕಲನ 'ಅಂತರಂಗದ ಅನಾವರಣ' ಕೃತಿ ಬಿಡುಗಡೆಗೊಳಿಸಲಾಯಿತು.

ಭೋವಿ ಗುರುಪೀಠದ ಶ್ರೀ ಜ. ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಮಡಿವಾಳ ಗುರುಪೀಠದ ಶ್ರೀ ಬಸವ ಮಾಚಿದೇವ ಸ್ವಾಮಿಗಳು, ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಕಾರ್ಯಕ್ರಮ ಪ್ರಾಯೋಜಕರಾದ ಶ್ರೀಧರ ಪಾಟೀಲ ಜೆಡಿಎಸ್ ಮುಖಂಡರು ದಾವಣಗೆರೆ ಮತ್ತು ಸಂದೀಪ ಗುಂಡಾರ್ಪಿ, ಕು। ತ್ರಿಷಿಕಾ ಜಿ.ಎಸ್. ಚಿತ್ರದುರ್ಗ ಭಾಗವಹಿಸಿದ್ದರು.

ಜಮುರಾ ಕಲಾವಿದರು ವಚನ ಗಾಯನ ಮಾಡಿದರು. ಸಂಗಮೇಶ ಎನ್.ಜವಾದಿ ಸ್ವಾಗತಿಸಿದರೆ, ಪಿ.ಟಿ. ಉಮೇಶ್ ನಿರೂಪಿಸಿ, ವಂದಿಸಿದರು.

# ಕೊಮಾರನಹಳ್ಳಿ : ಸ್ಮಶಾನಕ್ಕೆ ಅಗತ್ಯ ಸೌಲಭ್ಯ



**ಶಾಸಕ ರಾಮಪ್ಪ ಭರವಸೆ**

ಮಲೇಬೆನ್ನೂರು, ಏ.19- ಕೊಮಾರನಹಳ್ಳಿ ಗ್ರಾಮದ ತಿಮ್ಲಾಪುರ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಗೆ ಅವಶ್ಯವಿರುವ ತಂತಿ ಬೇಲಿ ಹಾಗೂ ಕುಡಿಯುವ ನೀರಿಗಾಗಿ ಬೋರ್‌ವೆಲ್ ವ್ಯವಸ್ಥೆ ಮಾಡುವುದಾಗಿ ಶಾಸಕ ಎಸ್. ರಾಮಪ್ಪ ಹೇಳಿದರು.

ಗ್ರಾ.ಪಂ ಸದಸ್ಯ ಎಂ.ಆರ್ ಬಸವರಾಜ್ ಅವರು ತಮ್ಮ ಸ್ವಂತ ಹಣದಲ್ಲಿ ರುದ್ರಭೂಮಿಯಲ್ಲಿ ಬೆಳೆದು ನಿಂತಿದ್ದ ಮುಳ್ಳುಗಿಡಗಳನ್ನು ಜೆಸಿಬಿ ಮೂಲಕ ಸ್ವಚ್ಛಗೊಳಿಸುವ ಕಾಮಗಾರಿ ವೀಕ್ಷಿಸಿದ ನಂತರ ಗ್ರಾಮಸ್ಥರೊಂದಿಗೆ ರುದ್ರಭೂಮಿ ಅಭಿವೃದ್ಧಿ ಪಡಿಸುವ ಕುರಿತು ಚರ್ಚಿಸಿದರು. ಸಾರ್ವಜನಿಕ ರುದ್ರಭೂಮಿಯನ್ನು ಸ್ವಂತ ಹಣದಲ್ಲಿ ಸ್ವಚ್ಛಗೊಳಿಸುವ ಮೂಲಕ ಗ್ರಾ.ಪಂ ಸದಸ್ಯ ಬಸ ವರಾಜ್ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ಶಾಸಕ ರಾಮಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಎಪಿಎಂಸಿ ನಿರ್ದೇಶಕ ಜಿ. ಮಂಜುನಾಥ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಗ್ರಾ.ಪಂ ಮಾಜಿ ಅಧ್ಯಕ್ಷ ಎಸ್.ಎಂ. ಮಂಜುನಾಥ್, ಪರಮೇಶ್ವರನಾಯ್ಕ್, ಹೋಟೆಲ್ ಪರಮೇಶ್ವರಪ್ಪ ಕರ್ಜಗಿ ಮಹೇಶ್ವರಪ್ಪ, ಪೂಜಾರ್ ಚಂದ್ರಪ್ಪ, ಬಿ.ಎಲ್. ರಂಗನಾಥ್, ಅಣ್ಣೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಉತ್ತಮ ನಾಯಕತ್ವಕ್ಕೆ ಸಮಾಜಮುಖಿ ಕೆಲಸವೇ ಬುನಾದಿ

## ಮೇಯರ್ ಎಸ್.ಟಿ. ವೀರೇಶ್ ಅಭಿಮತ



ದಾವಣಗೆರೆ, ಏ.19- ಯುವಕರು ಸಮಾಜಮುಖಿ ಕೆಲಸದಲ್ಲಿ ತೊಡಗಿಸಿಕೊಂಡರೆ ಉತ್ತಮ ನಾಯಕರಾಗಲು ಬುನಾದಿ ಆಗುತ್ತದೆ ಎಂದು ಮೇಯರ್ ಎಸ್.ಟಿ. ವೀರೇಶ್ ತಿಳಿಸಿದರು.

ಅವರು, ಇಂದು ನಗರದ ಹಳೇ ಕುಂದುವಾಡದಲ್ಲಿ ಮನಾ ಯುವ ಬ್ರಿಗೇಡ್, ಜರವೇ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಸಾಧಕರಿಗೆ ಸನ್ಮಾನ, 'ಕುಂದುವಾಡ ಯುವ ರತ್ನ ಪ್ರಶಸ್ತಿ', ಕೆಪಿಎಲ್ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿರು.

ಇಂದಿನ ಸಮಯದಲ್ಲಿ ಯುವಕರು ಬೇರೆ ಬೇರೆ ದಾರಿ ಕಡೆ, ದುಶ್ಚಟಗಳಿಗೆ ಬಲಿಯಾ ಗುತ್ತಿದ್ದಾರೆ. ಸಾಮಾಜಿಕ ಸೇವೆಗಳು, ಸಹಾಯ ಹಸ್ತ ಚಾಚುವಂತಹ ಯುವ ಮನಸ್ಸುಗಳು ಸಿಗು ವುದೇ ವಿರಳವಾಗಿದೆ, ಇಂತಹ ಕಾಲದಲ್ಲಿ ಮನಾ ಯುವ ಬ್ರಿಗೇಡ್ ಯುವಕರು, 44 ನೇ ವಾರ್ಡಿನಲ್ಲಿ ಅತ್ಯುತ್ತಮ ಸಾಮಾಜಿಕ ಸೇವೆ ಮಾಡುವ ಮೂಲಕ ಜವಾಬ್ದಾರಿ ಹೆಚ್ಚಿಸಿಕೊಂಡಿ ದ್ದಾರೆ.

ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡ ದಿ. ಜೆ.ಎಂ. ಹನುಮಂತಪ್ಪ ಅವರಿಗೆ ಮರ ಣೋತ್ತರ ಕುಂದುವಾಡ ರತ್ನ ಪ್ರಶಸ್ತಿ ಹಾಗೂ ಸಿಆರ್‌ಪಿಎಫ್ ಯೋಧ ಆನಂದ್ ಎಸ್. ಹೆಚ್, ಎಸ್‌ಎಸ್‌ಬಿ ಯೋಧ ಭರ್ಮಪ್ಪ, ಸಮಾಜ ಸೇವಕ ರಾಜು ಕರೂರು ಅವರಿಗೆ 'ಕುಂದುವಾಡ ಯುವ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜ ಸೇವಕರಿಗೆ ಸನ್ಮಾನಿಸಿ ಗೌರವಿಸಲಾಯಿತು, ಕೆಪಿಎಲ್ ಚಾಂಪಿಯನ್ ಪವರ್ ಫೈಟರ್ಸ್ ತಂಡಕ್ಕೆ ಟ್ರೋಫಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ವರ್ತಕರಾದ ರಾಘವೇಂದ್ರ ಎನ್. ದಿವಾಕರ್, ಪಾಲಿಕೆ ಮಾಜಿ ಸದಸ್ಯ ಹೆಚ್. ತಿಪ್ಪಣ್ಣ, ಮುಖಂಡರಾದ ಬಾಡದ ಆನಂದರಾಜ್, ನಾಗಭೂಷಣ್ ವಾಣಿ, ಮಿಟ್ಲಕಟ್ಟೆ ಚಂದ್ರಪ್ಪ, ಶಿವಪ್ಪ, ಜೆ.ಸಿ. ದೇವರಾಜ್, ಎನ್.ಟಿ. ನಾಗರಾಜ್, ಸಣ್ಣಿಂಗಪ್ಪ, ಮಂಜಪ್ಪ, ಗಿರೀಶ್ ದೇವರಮನೆ, ಪತ್ರಕರ್ತ ಮಧು ನಾಗರಾಜ್ ಕುಂದುವಾಡ ಸೇರಿದಂತೆ ಮತ್ತಿತರರಿದ್ದರು.

## ವಿದ್ಯಾಸಿರಿ : ಅರ್ಜಿ ಅವಧಿ ವಿಸ್ತರಣೆ

ದಾವಣಗೆರೆ, ಏ.19- 2020-21 ನೇ ಸಾಲಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ - ಊಟ ಮತ್ತು ವಸತಿ ಸಹಾಯ ಯೋಜನೆ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಏಪ್ರಿಲ್ 30 ರವರೆಗೆ ವಿಸ್ತರಿಸಲಾಗಿದೆ.

ಮಾಹಿತಿಗೆ ವೆಬ್‌ಸೈಟ್ www.ssp.postmatric.karnataka.gov.in, ದೂರವಾಣಿ ಸಂಖ್ಯೆ 8050770005 / 8050770004 ಕ್ಕೆ ಸಂಪರ್ಕಿಸಬಹುದು.

# ಅನಧಿಕೃತ ಗುಡಿಸಲು ತೆರವಿಗೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಏ.19- ಬಾಬಾ ಸಾಹೇಬ್ ಅಂಬೇಡ್ಕರ್ ಭವನ, ಅಂಗ ನವಾಡಿ ಕೇಂದ್ರಕ್ಕೆ ಮೀಸಲಿಟ್ಟ ತುರ್ಚಘಟ್ಟ ಗ್ರಾಮದ ಕಲ್ಲೇಶ್ವರ ಬಡಾವಣೆಯ ತಿಪ್ಪೆಬೀಳು ಜಾಗದಲ್ಲಿ ಅನಧಿಕೃತ ಗುಡಿಸಲು ಹಾಕಿಕೊಂಡವರನ್ನು ತೆರವುಗೊಳಿಸಲು ಒತ್ತಾಯಿಸಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ (ಎಸ್‌ಸಿ) ದಿಂದ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ನಗರದ ತಾಲ್ಲೂಕು ಕಚೇರಿ ಎದುರು ಸಂಘದ ಅಧ್ಯಕ್ಷ ಬಿ. ಪ್ರಸನ್ನ, ಕಾರ್ಯದರ್ಶಿ ಆರ್. ಮಂಜಪ್ಪ ನೇತೃತ್ವದಲ್ಲಿ ಪ್ರತಿಭಟಿಸಿದ ಗ್ರಾಮಸ್ಥರು, ಸದಸ್ಯರು, ತುರ್ಚಘಟ್ಟ ಗ್ರಾಮದಲ್ಲಿ ಅಂಬೇಡ್ಕರ್ ಭವನ, ಅಂಗನವಾಡಿ ಕೇಂದ್ರಕ್ಕೆ ಹಿಂದೆ ಗ್ರಾಮ ಸಭೆ ಮತ್ತು ಊರಿನ ಗ್ರಾಮಸ್ಥರ ಸಮ್ಮುಖದಲ್ಲಿ ಮೀಸಲಿಟ್ಟಿದ್ದು, ಆ ಜಾಗವನ್ನು ಉದ್ದೇಶಿತ ಕಾರ್ಯಕ್ಕಷ್ಟೇ ಮೀಸಲಿಡುವಂತೆ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ತುರ್ಚಘಟ್ಟ ಗ್ರಾಮದ ಅನೇಕ ಕುಟುಂಬಗಳು ಸರ್ಕಾರದಿಂದ ಜಮೀನು, ಜನತಾ ಮನೆ, ವಿವಿಧ ಯೋಜನೆಯಡಿ ವಸತಿ, ನಿವೇಶನಗಳನ್ನು ಪಡೆದಿವೆ.

ಮತ್ತೆ ಕೆಲವರು ಆರ್ಥಿಕವಾಗಿ ಸಬಲರಿದ್ದು, ಜೀವನಾಧಾರಕ್ಕೆ 1 ಎಕರೆಗಿಂತಲೂ ಹೆಚ್ಚು ಜಮೀನು ಹೊಂದಿದ್ದಾರೆ. ಮತ್ತೆ ಕೆಲವರು ನಿವೇಶನಗಳನ್ನೂ ಹೊಂದಿದ್ದಾರೆ. ವಾಸ್ತವ ಹೀಗಿದ್ದರೂ ಗ್ರಾಮದ ತಿಪ್ಪೆಬೀಳು ಜಾಗದಲ್ಲಿ ಗುಡಿಸಲು ಹಾಕಿಕೊಂಡು, ಏನೂ ಇಲ್ಲದವರಂತೆ ವರ್ತಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ತುರ್ಚಘಟ್ಟ ಗ್ರಾಮದ ಕೆಲವರು ಅನಧಿಕೃತವಾಗಿ ಗುಡಿಸಲು ಹಾಕಿಕೊಂಡಿದ್ದಾರೆ. ಅಲ್ಲಿರುವ ಕುಟುಂಬಗಳು ಆರ್ಥಿಕವಾಗಿ ಉತ್ತಮವಾಗಿದ್ದು, ಅವರಿಗೆ ಹಿಂದೆಯೂ ಜಮೀನು ಮತ್ತು ಸರ್ಕಾರಿ ಜನತಾ ಮನೆಗಳನ್ನು ನೀಡಲಾಗಿತ್ತು. ಅಂತಹವರ ದಾಖಲೆಗಳನ್ನೂ ಮನವಿ ಪತ್ರದಲ್ಲಿ ದಾಖಲಿಸಿದ್ದು, ಆ ಜಾಗವನ್ನು ಉದ್ದೇಶಿತ ಕಾರ್ಯಕ್ಕಾಗಿ ಬಿಡಿಸಿಕೊಡಬೇಕು. ಅನಧಿಕೃತವಾಗಿ ಗುಡಿಸಲು ಹಾಕಿಕೊಂಡ ಯಾರೂ ಸಹ ನಿರಾಶ್ರಿತರಲ್ಲ. ಎಲ್ಲರೂ ಆಶ್ರಿತರೇ ಆಗಿದ್ದು, ಜೀವನಕ್ಕೆ ಯಾವುದೇ ಸಮಸ್ಯೆ ಇಲ್ಲದವರು. ಹೊಲ, ಗದ್ದೆ ಇದೆ, ನಿವೇಶನ, ಮನೆಗಳೂ ಇವೆ. ಹೀಗಿದ್ದರೂ ಬಾಬಾ ಸಾಹೇಬ್ ಅಂಬೇಡ್ಕರ್ ಭವನಕ್ಕೆಂದು, ಅಂಗನವಾಡಿ ಕೇಂದ್ರ ನಿರ್ಮಿಸಲೆಂದು ಕಾಯ್ದಿಟ್ಟ ಜಾಗದಲ್ಲಿ ಗುಡಿಸಲುಗಳನ್ನು ಅನಧಿಕೃತವಾಗಿ ಹಾಕಿಕೊಂಡಿದ್ದಾರೆ. ತಕ್ಷಣವೇ ತಹಶೀಲ್ದಾರರು ಈ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ, ಜಾಗವನ್ನು ಉದ್ದೇಶಿತ ಕಾರ್ಯಕ್ಕೆ ಮಂಜೂರು ಮಾಡಿಕೊಡಬೇಕು ಎಂದು ಆಗ್ರಹಿಸಿದರು.

## ಕೊರೊನಾ ಜಾಗೃತಿ ಅಭಿಯಾನ



### ಅರಸೀಕೆರೆ

ಹರಪನಹಳ್ಳಿ, ಏ.19- ತಹಶೀಲ್ದಾರ್ ನೇತೃತ್ವದಲ್ಲಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಗ್ರಾಮ ಪಂಚಾಯ್ತಿ ಸಿಬ್ಬಂದಿ ಗ್ರಾಮದ ಬಸ್ ನಿಲ್ದಾಣದಲ್ಲಿರುವ ಕಿರಾಣಿ ಅಂಗಡಿಗಳು, ಹೋಟೆಲ್‌ಗಳು, ಬೇಕರಿಗಳಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿದರು.

ಸ್ವಚ್ಛತೆ ಇಲ್ಲದ ಕೆಲವು ಅಂಗಡಿಗಳಿಂದ ದಂಡ ವಸೂಲಿ ಸಹ ಮಾಡಲಾಯಿತು. ಅಲ್ಲದೆ ಗ್ರಾಮದ ಪ್ರಮುಖ ಆಸ್ಪತ್ರೆಗಳಿಗೆ ಭೇಟಿ ನೀಡಿ ಸ್ವಚ್ಛತೆ ಬಗ್ಗೆ ಎಚ್ಚರಿಸಿ, ಬರುವ ರೋಗಿಗಳ ಕಡೆ ಗಮನ ಹರಿಸಬೇಕು. ಜ್ವರ, ಶೀತ, ಕೆಮ್ಮು ಬಂದಂತಹ ರೋಗಿಗಳನ್ನು ನಿರ್ಲಕ್ಷ ಮಾಡದೆ, ಅಂಥವರ ಬಗ್ಗೆ ಸೂಕ್ತ ಗಮನ ನೀಡಬೇಕು ಎಂದು ತಿಳಿಸಿದರು.

ಕೋವಿಡ್ ಎರಡನೆಯ ಅಲೆ ದೇಶದಲ್ಲಿ ಹೆಚ್ಚಾಗುತ್ತಿದೆ. 45 ವರ್ಷಕ್ಕಿಂತ ಮೇಲ್ಪಟ್ಟವರು ತಪ್ಪದೇ ಲಸಿಕೆ ಯನ್ನು ಹಾಕಿಸಿಕೊಳ್ಳುವುದು ನಿಮ್ಮ ಜವಾಬ್ದಾರಿ ಸಹ ಆಗಿದೆ. ಎಲ್ಲರೂ ತಪ್ಪದೇ ಮಾಸ್ಕ್ ಹಾಕಿಕೊಳ್ಳಬೇಕು, ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಸ್ಯಾನಿಟೈಜರ್ ಬಳಸಬೇಕು. ಸಾರ್ವಜನಿಕ ಇದೇ ರೀತಿ ಬೇಜವಾಬ್ದಾರಿತನದಿಂದ ಕೂಡಿದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮ ಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಪಿಎಸ್‌ಐಗಳಾದ ಎ. ಕಿರಣ್ ಕುಮಾರ್, ನಾಗರತ್ನ, ಉಪ ತಹಶೀಲ್ದಾರ್ ಫಾತಿಮಾ ಬಿ, ಪಿಡಿಓ ಅಂಜಿನಪ್ಪ, ಇಲಾಖೆಗಳ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ಶ್ರೀರಾಮ ನವಮಿ : ಮಾಂಸ ಮಾರಾಟ ನಿಷೇಧ

ದಾವಣಗೆರೆ, ಏ. 19- ನಾಡಿದ್ದು ದಿನಾಂಕ 21 ರ ಬುಧವಾರ ಶ್ರೀರಾಮನವಮಿ ಪ್ರಯುಕ್ತ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಆದ್ದರಿಂದ ಮಾಂಸ ಉದ್ದಿಮೆದಾರರು ಅಂದು ಮಾಂಸ ಮಾರಾಟ ಮಾಡಬಾರದು. ತಪ್ಪಿದಲ್ಲಿ ಮಹಾನಗರಪಾಲಿಕೆ ಕಾಯ್ದೆಯ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಾನಗರಪಾಲಿಕೆಯ ಪಶು ವೈದ್ಯಕೀಯ ಸೇವೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಎಲೆಬೇತೂರಿನಲ್ಲಿ 105 ವರ್ಷದ ವೃದ್ಧೆಗೆ ಲಸಿಕೆ



ದಾವಣಗೆರೆ, ಏ. 19- ತಾಲ್ಲೂಕಿನ ಎಲೆಬೇತೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೊರೊನಾ ಲಸಿಕೆ ಉತ್ಸವ ನಡೆಯಿತು.

105 ವರ್ಷದ ಅಜ್ಜಿ ಅಂಬಾಬಾಯಿ ಕುಲಕರ್ಣಿ, 80 ವರ್ಷದ ಮಗಳು ಸರಸ್ವತಿ ನಾಡಿಗರ್ ಕೊರೊನಾ ಲಸಿಕೆ ಹಾಕಿಸಿಕೊಂಡರು. ನಗರದ ಕೆಟಿಜೆ ನಗರದ ರಂಗನಾಥ ನಾಡಿಗರ್ ಮನೆತನದವರಾಗಿರುವ ಅಂಬಾಬಾಯಿ ಕುಲಕರ್ಣಿ ಲಸಿಕೆ ಪಡೆದು ಮಾತನಾಡುತ್ತಾ, 45 ವರ್ಷ ಮೇಲ್ಪಟ್ಟ ಎಲ್ಲರೂ ಕೊರೊನಾ ಲಸಿಕೆ ಹಾಕಿಸಿಕೊಂಡು ಆರೋಗ್ಯವಂತರಾಗಿರಿ ಎಂದು ಗಟ್ಟಿ ಧ್ವನಿಯಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಆಶಾ ಭಾನುಪ್ರಕಾಶ್, ಬೇತೂರು ಕೇಂದ್ರದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಡಿ. ಮಿಲ್ಕಾ, ನಿರ್ಮಲ ಕುಲಕರ್ಣಿ, ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು. ಎಲೆಬೇತೂರು ಉಪಕೇಂದ್ರದಲ್ಲಿ ಏಪ್ರಿಲ್ 5 ರಂದು ಕೊರೊನಾ ಲಸಿಕೆ ಹಾಕಲು ಪ್ರಾರಂಭಿಸಿದ್ದು, 222 ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ.

## ಕಾರ್ಯಾಗಾರ ಮುಂದೂಡಿಕೆ

ದಾವಣಗೆರೆ : ಇಂದು ಬೆಳಿಗ್ಗೆ 11.30 ಕ್ಕೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಟ್ರಾನ್ಸ್‌ಜೆಂಡರ್‌ರವರ 'ಸಂವೇದನಾಶೀಲ ಕಾರ್ಯಾಗಾರ' ವನ್ನು ಕಾರಣಾಂತರದಿಂದ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ನಿಗದಿಯಾದ ನಂತರ ತಿಳಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಹೆಚ್. ವಿಜಯಕುಮಾರ್ ತಿಳಿಸಿದ್ದಾರೆ.

## ಏಕಗವಾಕ್ಷಿ ಸಮಿತಿ ಸಭೆ

ದಾವಣಗೆರೆ, ಏ. 19- ಇದೇ 22 ರ ಗುರುವಾರದಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಜಯಪ್ರಕಾಶ್ ನಾರಾಯಣ್ ತಿಳಿಸಿದ್ದಾರೆ

## ರಾಜ್ಯ ವಾರ್ತೆ

### ಕೊರೊನಾ: ಜನರ ಸಹಕಾರವಿಲ್ಲದೇ ಕಾನೂನು ಪ್ರಯೋಜನವಾಗದು

ಬೆಂಗಳೂರು, ಏ. 19 - ಸಾರ್ವಜನಿಕರ ಸಹಕಾರವಿಲ್ಲದಿದ್ದರೆ ಸರ್ಕಾರ ಏನೇ ಕಾನೂನು, ಕಟ್ಟಳೆಗಳನ್ನು ಜಾರಿಗೆ ತಂದರೂ ಪ್ರಯೋಜನವಾಗುವುದಿಲ್ಲ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ನಿರ್ಬಂಧ ಹಾಕಿಕೊಳ್ಳಬೇಕು

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ನಿಯಮಗಳಿಗಿಂತ ಕೊರೊನಾ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ನಿರ್ಬಂಧ ಹಾಕಿಕೊಳ್ಳಬೇಕೆಂದು ಮನವಿ ಮಾಡಿದರು.

ನಾವು ಕಠಿಣ ನಿಯಮಗಳನ್ನು ಜಾರಿ ಮಾಡುವುದು ಒಂದು ಭಾಗ. 144 ನೆ ಸೆಕ್ಷನ್, ಲಾಕ್‌ಡೌನ್, ಕರ್ಫ್ಯೂ ಇವೆಲ್ಲಕ್ಕಿಂತ ಹೆಚ್ಚಾಗಿ ಸಾರ್ವಜನಿಕರು ತಮಗೆ ತಾವೇ ನಿರ್ಬಂಧ ಹಾಕಿಕೊಳ್ಳಬೇಕು ಎಂದು ಸಲಹೆ ಮಾಡಿದರು. ಬೆಂಗಳೂರು ಸೇರಿದಂತೆ ಮತ್ತಿತರೆ ಕಡೆ ಲಾಕ್‌ಡೌನ್ ಜಾರಿ ಮಾಡಬೇಕೇ? ಕಠಿಣ ನಿಯಮಗಳನ್ನು ಜಾರಿಗೆ ತರಬೇಕೇ? ಎಂಬುದರ ಬಗ್ಗೆ ಇಂದು ನಡೆಯಲಿರುವ ಜನಪ್ರತಿನಿಗಳ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಎಲ್ಲರ ಅಭಿಪ್ರಾಯವನ್ನು ಪಡೆದೇ ಸರ್ಕಾರ ಮುಂದಿನ ತೀರ್ಮಾನ ಕೈಗೊಳ್ಳಲಿದೆ ಎಂದರು.

ಬೆಂಗಳೂರಿನಲ್ಲಿ ಕೊರೊನಾ ಸೋಂಕು ಹೆಚ್ಚುತ್ತಿರುವುದರಿಂದ ಯಾವ ರೀತಿ ಕಾನೂನುಗಳನ್ನು ಜಾರಿ ಮಾಡಬೇಕು ಎಂಬುದರ ಕುರಿತು ಈಗಾಗಲೇ ನಗರ ಆಯುಕ್ತರ ಜೊತೆ ಚರ್ಚಿಸಲಾಗಿದೆ.

ಈ ಹಿಂದೆ ಲಾಕ್‌ಡೌನ್ ಸಂದರ್ಭದಲ್ಲಿ ಇಲ್ಲಿನ ಡಿಸಿಪಿ, ಎಸಿಪಿ ಸೇರಿದಂತೆ ಎಲ್ಲರಿಗೂ ಕೆಲಸ ಮಾಡಿದ ಅನುಭವವಿದೆ. ಅವರಿಗೆ ನಾವೇನು ಸಲಹೆ ಮಾಡುವ ಅಗತ್ಯವಿಲ್ಲ. ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿ ನಮ್ಮ ಪೊಲೀಸರಿಗೆ ಇದೆ ಎಂದು ಹೇಳಿದರು.

ಇಂದು ಲೋಕಸಭಾ ಸ್ಪೀಕರ್ ಅವರ ವರ್ಚುಯಲ್ ಸಭೆ ನಡೆಯಲಿದೆ. ದೇಶದ ವಿವಿಧ ರಾಜ್ಯಗಳು ಸ್ಪೀಕರ್‌ಗಳ, ಗೃಹ ಸಚಿವರು ಮತ್ತಿತರರು ಇದರಲ್ಲಿ ಭಾಗಿಯಾಗಲಿದ್ದಾರೆ. ಅಲ್ಲಿ ಯಾವ ಅಭಿಪ್ರಾಯ ವ್ಯಕ್ತವಾಗುತ್ತದೆ ಎಂಬುದನ್ನು ನೋಡಿಕೊಂಡು ನಮ್ಮ ಸರ್ಕಾರ ಮುಂದುವರೆಯುತ್ತದೆ ಎಂದು ತಿಳಿಸಿದರು.

### ಆರೋಗ್ಯಕ್ಕೆ 30 ಸಾವಿರ ಕೋಟಿ ರೂ. ಕೊಡಿ

#### ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹ

ಬೆಂಗಳೂರು, ಏ. 19 - ಕೊರೊನಾ ಎರಡನೇ ಅಲೆ ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಕ್ಷೇತ್ರಕ್ಕೆ 30 ಸಾವಿರ ಕೋಟಿ ರೂಪಾಯಿ ಮೀಸಲಿಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಕೊರೊನಾ ಪರಿಸ್ಥಿತಿ ದಿನೇ ದಿನೇ ಗಂಭೀರವಾಗುತ್ತಿದೆ. ಸೋಂಕಿತರಿಗೆ ಬೆಡ್‌ಗಳು ಸಿಗುತ್ತಿಲ್ಲ. ಐಸಿಯು, ರೆಮ್ ಡಿಸಿವಿರ್ ಲಸಿಕೆ, ಆಮ್ಲಜನಕ ಅಭಾವ ಸೃಷ್ಟಿಯಾಗಿದೆ. ಪ್ರತಿ ವಿಚಾರದಲ್ಲೂ ಪರಿಸ್ಥಿತಿ ಬಿಗಡಾಯಿಸುತ್ತಿದ್ದು, ಸರ್ಕಾರ ಕೂಡಲೇ ಅಭಿವೃದ್ಧಿ ಯೋಜನೆಗಳನ್ನು ನಿಲ್ಲಿಸಿ, ಆ ಹಣವನ್ನು ಕೊರೊನಾ ನಿಯಂತ್ರಣಕ್ಕೆ ವಿನಿಯೋಗಿಸಬೇಕು. ಸಮರೋಪಾದಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಅತಿ ಹೆಚ್ಚು ವೈದ್ಯಕೀಯ ಕಾಲೇಜುಗಳಿವೆ. ಸಾಕಷ್ಟು ಪ್ರಮಾಣದಲ್ಲಿ ವೈದ್ಯರು, ಆರೋಗ್ಯ ಸಿಬ್ಬಂದಿಗಳಿದ್ದಾರೆ. ಈ ಎಲ್ಲ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಉಚಿತ ಚಿಕಿತ್ಸೆ ಸಿಗುವಂತಾಗಬೇಕು. ಪರೀಕ್ಷೆ ಪ್ರಮಾಣ ಹೆಚ್ಚಿಸಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಕನಿಷ್ಠ ಪಕ್ಷ 30 ಸಾವಿರ ಕೋಟಿ ರೂ.ಗಳನ್ನಾದರೂ ಮೀಸಲಿಡಬೇಕು ಎಂದು ಶಿವಕುಮಾರ್ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

### ಕೊರೊನಾ ಎರಡನೇ ಅಲೆ

#### ವಿಪಕ್ಷ ನಾಯಕರ ಜೊತೆ ಸಿಎಂ ಸಂವಾದ

ಬೆಂಗಳೂರು, ಏ. 19 - ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ತೀವ್ರಗೊಳ್ಳುತ್ತಿರುವುದರಿಂದ ಪರಿಸ್ಥಿತಿ ಅವಲೋಕಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರತಿಪಕ್ಷದ ನಾಯಕರುಗಳ ಜೊತೆ ವಿಡಿಯೋ ಸಂವಾದ ನಡೆಸಲಿದ್ದಾರೆ.

ಕೋವಿಡ್‌ನಿಂದ ಬಳಲುತ್ತಿರುವ ಮುಖ್ಯಮಂತ್ರಿಯವರು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆಸ್ಪತ್ರೆಯಿಂದಲೇ ವಿಡಿಯೋ ಸಂವಾದ ನಡೆಸಲಿದ್ದಾರೆ.


ಈ ಸಂವಾದದಲ್ಲಿ ರಾಜ್ಯಪಾಲ ವಾಜೂಭಾಯಿ ವಾಲಾ ಕೂಡಾ ಭಾಗವಹಿಸಲಿದ್ದಾರೆ. ಇವರಲ್ಲದೆ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಎಸ್.ಆರ್. ಪಾಟೀಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಅದೇ ಪಕ್ಷಕ್ಕೆ ಸೇರಿದ ಹೆಚ್.ಕೆ. ಕುಮಾರಸ್ವಾಮಿ ಹಾಗೂ ಹೆಚ್.ಡಿ. ರೇವಣ್ಣ ಈ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕೋವಿಡ್‌ನಿಂದ ಬಳಲುತ್ತಿರುವ ಕುಮಾರಸ್ವಾಮಿ ಕೂಡಾ ಆಸ್ಪತ್ರೆಯಿಂದಲೇ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ.

### ಬೆಂಗಳೂರು: ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು, ಏ.19- ಶ್ರೀ ಬನಶಂಕರಿ ಟ್ರಸ್ಟ್ ಮತ್ತು ಬೆಂಗಳೂರು ವುಮೆನ್ಸ್ ಲೀಗ್ ಜಂಟಿಯಾಗಿ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳ ಸಾಧಕರಿಂದ ಹಾಗೂ ಕೊರೊನಾ ವಾರಿಯರ್ಸ್‌ಗಳಿಂದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9880505278 ಸಂಪರ್ಕಿಸಲು ಸಂಸ್ಥೆ ತಿಳಿಸಿದೆ.

## ನಾಯಕ ವಿದ್ಯಾರ್ಥಿ ನಿಲಯದಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ



ದಾವಣಗೆರೆ, ಏ. 19- ನಗರದ ಪಿಜೆ ಬಡಾವಣೆಯಲ್ಲಿರುವ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಈಚೆಗೆ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಆಚರಿಸಲಾಯಿತು.

ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ. ವೀರಣ್ಣ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ, ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ. 30x40 West, 40 ಅಡಿ ರೋಡಿಗಿದೆ, 30x50West, 30x57 East, 60x50 West, 60x57 East
ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ 25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಶ್ರೀ ಕಾಶಿರೆಡ್ಡಿ ಕುಟುಂಬ ವರ್ಗದವರ ಸೇವಾರ್ಥ ಕ್ಲಾಸ್ ಒನ್ ಕಾಂಟ್ರ್ಯಾಕ್ಟರ್, ದಾವಣಗೆರೆ.

**WANTED**
1) Ayah
2) Lab Technician-2
DMLT passed can apply.
Contact : 98440 65638

**ನಾಯಿ ಮರಿ ಕಳೆದಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್, ಐ.ಎಂ.ಎ. ಹಾಲ್ ಹತ್ತಿರದ ಮನೆಯಿಂದ ದಿನಾಂಕ 19.04.2021 ರ ಬೆಳಗಿನ ಜಾವ 7.30 ಕ್ಕೆ ಕಂದು ಬಿಳಿ ಬಣ್ಣದ ಲ್ಯಾಬರ್ ಡರ್ ನಾಯಿ ಮರಿ ಕಾಣೆಯಾಗಿದೆ. ವಯಸ್ಸು: 1 1/2 ತಿಂಗಳು. ಯಾರಿಗಾದರೂ ಕಂಡು ಬಂದಲ್ಲಿ ಈ ಮೊಬೈಲ್ ನಂ. ಗೆ ಕರೆ ಮಾಡಿ.
99722 34394
80505 94121

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x48 ಪಶ್ಚಿಮ, ಬನಶಂಕರಿ ಬಡಾವಣೆಯಲ್ಲಿ 40x33 ಪಶ್ಚಿಮ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ.
ಸ್ವಾಮಿ ಏಜೆಂಟ್ ವಿದ್ಯಾನಗರ 97421 44715

**ಸೈಟ್‌ಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ಪಕ್ಕ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ. 45x58 south, 30x35 East, 30x70 West, 30x50 west, 30x40 East
ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಮನೆಗಳು ಮಾರಾಟಕ್ಕಿವೆ**
40x60 North, 3 ಬೆಡ್ ರೂಂ ಮನೆ, ಕುವೆಂಪು ಬಡಾವಣೆಯಲ್ಲಿ, 30x40 South, ಡಿ.ಸಿ.ಎಂ. ಲೇಔಟ್‌ನಲ್ಲಿ, 20x30 East, ಸರಸ್ವತಿ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಬಸವರಾಜ ಪೇಟೆ ಡಿ.ಎನ್.ಎಂ ರಸ್ತೆ (#177/D) 'ಬಸವ ಸದನ'ದಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಮೊದಲನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
99014 73177
99008 17791

**ಮನೆ ಬಾಡಿಗೆಗೆ ಇದೆ**
ರಿಯಲ್ ಎಸ್ಟೇಟ್ ಏಜೆಂಟ್
5 BHK ಇಂಡಿಪೆಂಡೆಂಟ್, ಜಯನಗರ, 4 BHK ಶಿವಕುಮಾರ ಸ್ವಾಮಿ ಲೇಔಟ್, 3 BHK ಆಂಜನೇಯ ಬಡಾವಣೆ, 2BHK ಎಸ್.ಎಸ್ ಲೇಔಟ್, 2BHK ಶಿವಕುಮಾರ ಸ್ವಾಮಿ ಲೇಔಟ್, 1 BHK ಸ್ವಾಮಿ ವಿವೇಕಾನಂದ ಬಡಾವಣೆ, ರೂಂ.
78927 93994

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. PUC or Any Degree
ಕಾವೇರಿ ಮೆಡಿಹೌಸ್ ಪ್ರೈ.ಲಿ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577004

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ಹರಿಹರ ಹಾಗೂ ದೊಡ್ಡಬಾತಿ ಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ ESI& PF ಸೌಲಭ್ಯವಿರುತ್ತದೆ ತಕ್ಷಣ ಸಂಪರ್ಕಿಸಿ
9742664701
9113907097

**EXCHANGE OFFER**
ನಮ್ಮಲ್ಲಿ ಎಲ್ಲಾ ತರಹದ ಸೋಫಾ ಕುಷನ್ ಹಾಗೂ Sponge Bed, Double Cot ಸಿಗುತ್ತವೆ. ರಿಪೇರಿ ಸಹ ಮಾಡುತ್ತೇವೆ.
74830 88761

**ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಗೆ ಮಹಿಳೆಯರು ಬೇಕಾಗಿದ್ದಾರೆ. ಆಫೀಸ್ ಕ್ಲೀನಿಂಗ್ ಕೆಲಕ್ಕೆ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ
99027 59663

**ಸೈಟ್ ಮಾರಾಟಕ್ಕಿದೆ**
ಹರಿಹರದ ಕಿರ್ಲೋಸ್ಕರ್ ಕಂಪನಿ ಗೇಟ್ ಎದುರು ಮೇನ್ ರೋಡ್‌ಗೆ 57x140 ಸೈಟ್ ಮಾರಾಟಕ್ಕಿದೆ.
86181 82332

**SWIGGY HIRING**
DELIVERY EXECUTIVES, FULL TIME / PART TIME 4000 TO 5000 WEEKLY SALARY. CONTACT
99866 92789
99866 93009

**ಬೇಕಾಗಿದ್ದಾರೆ**
ಎಸ್.ಎನ್. ಎಂಟರ್‌ಪ್ರೈಸಸ್ ವಾಟರ್ ಪ್ಯೂರಿಫೈಯರ್ ಆಫೀಸ್‌ನಲ್ಲಿ ಟೆಲಿ ಮಾರ್ಕೆಟಿಂಗ್ ಮಾಡಲು ಯುವತಿಯರು (ಅವಿವಾಹಿತ) ಸಂಬಳ 7000 ರಿಂದ 8000/- ಹೆಲ್ಪರ್ ಕೆಲಸಕ್ಕಾಗಿ ಯುವಕರು (ಬೈಕ್ ಹೊಂದಿರಬೇಕು) ಸಂಬಳ 9000 ದಿಂದ 10,000/-
ಟೆಲಿ ಮಾರ್ಕೆಟಿಂಗ್: 80505 -90494
ಹೆಲ್ಪರ್: 99025 04943

**Requierd**
Ladies Staff Required For Recepationist Sales and Accounts for Plywood showroom
Contact 98865 11185

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು ದಿ. 21-04-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**REQUIRED**
India's largest Financial Company is offering Income Opportunity for Senior Citizens, Retired Teachers / Lecturers / Bankers, Doctors, Businessmen and Home Makers with Fixed Payout and Incentives.
Call : 99451 58417

**ಸೈಟ್ ಬೇಕಾಗಿದೆ**
ಎಸ್.ಎಸ್. ಲೇಔಟ್‌ನಲ್ಲಿ ಸೈಟ್ ಬೇಕಾಗಿದೆ.
90362 81419

**Site For Sale**
Size : 20x34.5
1200 Rs per Sqft P.B. Road, Near Milk dairy, Bathi, Davanagere.
99005 47328

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.**
89715 04492
81056 99985
99004 67508

**ಮನೆ ಮಾರಾಟಕ್ಕಿದೆ**
ನಿಟುವಳ್ಳಿ, ಹೆಚ್.ಕೆ.ಆರ್ ಸರ್ಕಲ್ ಹತ್ತಿರ ದಕ್ಷಿಣ ದಿಕ್ಕು, 3 ಅಂತಸ್ತಿನ 15x42 ಅಳತೆ
70194 69658
98447 45856

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಕ್ಯಾಷಿಯರ್-1, ಸೇಲ್ಸ್ ಗರ್ಲ್ಸ್ -5, ಸೇಲ್ಸ್ ಬಾಯ್ಸ್ -5 ಕ್ಲೀನಿಂಗ್-1
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವಲ್ಡ್ ಸೈಟ್‌ಗಳು ಮಾರಾಟಕ್ಕಿವೆ ಯುಗಾದಿ ಹಬ್ಬದ ಪ್ರಯುಕ್ತ ಸುಲಭ ಕಂತುಗಳಲ್ಲಿ Rs 25,000/- ಅಥವಾ 14,500/- ಕಂತು
98441 24217
94481 55202
86603 11021
93431 10009

**2 BHK House For Lease/Rent**
# 1430 LIC Colony, near, Nutana College
Contact
90089 52333
73382 43777

**BUILDING FOR RENT**
Building for Rent on Mama's Joint on 1st floor, Prime Location is on rent
Contact : 98440 65638

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ್. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ ಫಸ್ಟ್ ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.
82177 72482

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
96068 18273

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**Industrial Site ಮಾರಾಟಕ್ಕಿದೆ**
ಪಿ.ಬಿ. ರಸ್ತೆಗೆ ಇರುವ ಸಬ್ ರಿಜಿಸ್ಟ್ರಾರ್ ಆಫೀಸ್ ಎದುರು MRF Show Room ಮತ್ತು ಮೆಟ್ರೋ ಟಾರ್ಪಾಲಿನ್ ಮಧ್ಯೆ ಹಾದು ಹೋಗುವ ರಸ್ತೆಗೆ 25x88 ಅಡಿ ಅಳತೆಯ ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
Mohan Real Estate Agencies
97424 34049

## ಮಹಾಬಲೇಶ್ವರ ದೇವಾಲಯ ಉಸ್ತುವಾರಿಗೆ ಸುಪ್ರೀಂ ಸಮಿತಿ

ನವದೆಹಲಿ, ಏ. 19 – ಗೋಕರ್ಣದ ಮಹಾಬಲೇಶ್ವರ ದೇವಾಲಯದ ಉಸ್ತುವಾರಿಯನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿಗೆ ವಹಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರ ನೇತೃತ್ವದ ಸಮಿತಿ ದೇವಾಲಯದ ವ್ಯವಹಾರಗಳನ್ನು ನಿರ್ವಹಿಸಲಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್ ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರಿದ್ದಾರೆ. ಕರ್ನಾಟಕ ಸರ್ಕಾರ ದೇವಾಲಯದ ನಿರ್ವಹಣೆಯನ್ನು ರಾಮಚಂದ್ರಾಪುರ ಮಠಕ್ಕೆ ವಹಿಸಿತ್ತು. ಇದನ್ನು ರದ್ದುಗೊಳಿಸಿ ಕರ್ನಾಟಕ ಹೈಕೋರ್ಟ್ ಆದೇಶ ಹೊರಡಿಸಿತ್ತು. ಹೈಕೋರ್ಟ್ ಆದೇಶದ ವಿರುದ್ಧ ಮಠ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ದೇವಾಲಯದ ನಿರ್ವಹಣೆಯನ್ನು ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಗೆ ವಹಿಸಿದೆ.

## ರಾಣೇಬೆನ್ನೂರಿನಲ್ಲಿ ಇಂದು ಹೋಮ, ನಾಳೆ ದತ್ತಾತ್ರೇಯ ಪ್ರತಿಷ್ಠಾಪನೆ

ರಾಣೇಬೆನ್ನೂರು : ಸ್ವಕುಳಸಾಳಿ ಸಮಾಜದ ಆಶ್ರಯದಲ್ಲಿ ಇಂದು ಬೆಳಿಗ್ಗೆ 6 ಗಂಟೆಗೆ ವಾಸ್ತು ಶಾಂತಿ ಹೋಮ, ನಂತರ ದತ್ತಾತ್ರೇಯ ಮತ್ತು ಹನುಮಂತ ದೇವರ ಪ್ರತಿಷ್ಠಾಂಗ ಹೋಮ ಕಾರ್ಯಕ್ರಮ ಜರುಗಲಿದೆ.

ನಾಳೆ ದಿನಾಂಕ ಏ. 20 ರಂದು ಬೆಳಿಗ್ಗೆ 6 ಗಂಟೆಗೆ ಪೂರ್ಣಾಹುತಿ, ಶ್ರೀ ಗುರು ದತ್ತಾತ್ರೇಯ ಹಾಗೂ ಶ್ರೀ ಹನುಮಂತ ದೇವರ ಮೂರ್ತಿ ಪ್ರತಿಷ್ಠಾಪನೆ, ಮಧ್ಯಾಹ್ನ 1 ಗಂಟೆಗೆ ಶ್ರೀ ಜಿಹ್ವೇಶ್ವರ ಸಭಾಭವನ ಉದ್ಘಾಟನಾ ಸಮಾರಂಭ ನಡೆಯಲಿದೆ. ರಾಮಕೃಷ್ಣ ಆಶ್ರಮದ ಶ್ರೀ ಪ್ರಕಾಶಾನಂದ ಮಹಾರಾಜರ ದಿವ್ಯಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿವೆ.

ಸ್ವಕುಳಸಾಳಿ ಸಮಾಜದ ತಾಲ್ಲೂಕು ಅಧ್ಯಕ್ಷ ಖಂಡಪ್ಪ ರೋಖಡೆ ಅಧ್ಯಕ್ಷತೆ ವಹಿಸುವರು. ಅಖಿಲ ಭಾರತೀಯ ಸ್ವಕುಳಸಾಳಿ ಸಮಾಜದ ಅಧ್ಯಕ್ಷ ರಮೇಶ್ ಎ. ಚಿಳ್ಳಾಳ, ರಾಜ್ಯಾಧ್ಯಕ್ಷ ಚಂದ್ರಕಾಂತ್ ಎನ್. ಭಂಡಾರೆ ಮುಖ್ಯ ಅತಿಥಿಗಳಾಗಿ ಆಗಮಿಸುವರು.

# ಇಂಡಿಯನ್ ಬ್ಯಾಂಕ್ ಮುಂದೆ ರೈತರ ಧರಣಿ



### ರಾಣೇಬೆನ್ನೂರು : ಸಾಲ ಮನ್ನಾ ಹಣ ಜಮೆ ಮಾಡುವಂತೆ ಒತ್ತಾಯ

ರಾಣೇಬೆನ್ನೂರು, ಏ.19- ಸಾಲ ಮನ್ನಾ ಹಣವನ್ನು ರೈತರ ಖಾತೆಗಳಿಗೆ ಜಮೆ ಮಾಡಲು ವಿಳಂಬ ಧೋರಣೆ ಅನುಸರಿಸುತ್ತಿರುವ ಇಂಡಿಯನ್ ಬ್ಯಾಂಕ್ ವ್ಯವಸ್ಥಾಪಕರ ವರ್ತನೆ ಖಂಡಿಸಿ ನಮ್ಮ ಭೂಮಿ, ನಮ್ಮ ಜೀವ ರೈತಪರ ಹೋರಾಟ ಸಮಿತಿ ಮತ್ತು ತಾಲ್ಲೂಕಿನ ರೈತರು ಇಂದು ಬ್ಯಾಂಕ್‌ನ ಮುಂದೆ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಸಮಿತಿಯ ಜಿಲ್ಲಾಧ್ಯಕ್ಷ ಎಸ್.ಡಿ. ಹಿರೇಮಠ ಮಾತನಾಡಿ, ಬ್ಯಾಂಕಿನವರು ಇದುವರೆಗೂ ರೈತರ ಸಾಲ ಮನ್ನಾ ಹಣ ಜಮೆ ಮಾಡದೆ, ರೈತರ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಈ ಕುರಿತಂತೆ ಹಲವು ಬಾರಿ ಧರಣಿ, ಹೋರಾಟ, ಪ್ರತಿಭಟನೆ ನಡೆಸಿದಾಗಲೂ ಏನೋ ಒಂದು ಕಾರಣಗಳನ್ನು ನೀಡಿ ಸಾಗು ಹಾಕುತ್ತಿದ್ದಾರೆ. ಏ.15 ರೊಳಗಾಗಿ ರೈತರ ಖಾತೆಗಳಿಗೆ ಹಣ ಜಮೆ ಮಾಡುವುದಾಗಿ ಲಿಖಿತ ಭರವಸೆ ನೀಡಿದ್ದರೂ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ ಎಂದು ದೂರಿದರು.

ಇಲ್ಲಿಯವರೆಗೂ ಈ ಬ್ಯಾಂಕಿನ ವ್ಯವಸ್ಥಾಪಕರು ಹಣ ಹಾಕದೆ, ಯಾವುದೇ ವಿಷಯವನ್ನು ತಿಳಿಸದೆ ರೈತ ವಿರೋಧಿ ಧೋರಣೆ ಅನುಸರಿಸುತ್ತಿದ್ದಾರೆ. ಇದರ ಬಗ್ಗೆ ವಿಚಾರಿಸಿದರೆ ತಮಗೆ ಸಂಬಂಧವಿಲ್ಲ, ಜಿಲ್ಲಾಧಿಕಾರಿಗಳ ಗಮನಕ್ಕೆ ತನ್ನಿ, ಅವರ ಆದೇಶ ಮಾರ್ಗದರ್ಶನದಂತೆ ನಾವು ನಡೆದುಕೊಳ್ಳುತ್ತೇವೆ. ನಮ್ಮ ಕೈಯಲ್ಲಿ ಏನೂ ಇಲ್ಲ ಎಂದು ಉಡಾಫೆ ಉತ್ತರ ನೀಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಪರಿಹಾರದ ಹಣ ಜಮೆ ಆಗುವವರೆಗೂ ರೈತರು ಸ್ಥಳ ಬಿಟ್ಟು ಕದಲುವುದಿಲ್ಲ ಎಂದು ಬಿಗಿಪಟ್ಟು ಹಿಡಿದರು.

ಸ್ಥಳಕ್ಕೆ ಧಾವಿಸಿದ ಸಿಪಿಐ ಎಂ.ಬಿ. ಗೌಡಪ್ಪಗೌಡ್ರ, ಪಿಎಸ್ಐ ಪ್ರಭು ಕೆಳಗಿನಮನಿ ಮತ್ತು ಪೊಲೀಸ್ ಸಿಬ್ಬಂದಿ ಪ್ರತಿಭಟನಾ ನಿರತರನ್ನು ಮನವೊಲಿಸಲು ಪ್ರಯತ್ನಿಸಿದರು. ಕೋವಿಡ್ ನಿಯಮಾವಳಿ ಮತ್ತು ಸರಕಾರದ ಆದೇಶದಂತೆ ಸಾರ್ವಜನಿಕವಾಗಿ ಯಾವುದೇ ಧರಣಿ, ಪ್ರತಿಭಟನೆ ನಡೆಸುವಂತಿಲ್ಲ. ಹೀಗಾಗಿ ನಾವು ಅನಿವಾರ್ಯವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಈಗಲೇ ಸ್ಥಳ ಬಿಟ್ಟು ತಮ್ಮ ತಮ್ಮ ಗ್ರಾಮಗಳಿಗೆ ತೆರಳಬೇಕೆಂದು ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ರೈತರು ಪರಿಹಾರ ಸಿಗುವವರೆಗೂ ತಾವು ಇಲ್ಲಿಂದ ತೆರಳುವುದಿಲ್ಲ ಎಂದು ಹಠ ಹಿಡಿದು ಕುಳಿತರು.

ಅಂತಿಮವಾಗಿ ಎಸ್.ಡಿ.ಹಿರೇಮಠ ಮತ್ತು ಪೊಲೀಸ್ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಬ್ಯಾಂಕಿನ ವ್ಯವಸ್ಥಾಪಕರೊಂದಿಗೆ ಸಮಾಲೋಚನೆ ನಡೆಸಿ, ಮೇಲಾಧಿಕಾರಿಗಳ ಆದೇಶದಂತೆ ತಾವು ಕ್ರಮ ಕೈಗೊಳ್ಳುವುದಾಗಿ ವ್ಯವಸ್ಥಾಪಕ ವೆಂಕಟೇಶ್ ಅವರು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು.

ಮಲ್ಲಿಕಾರ್ಜುನ ಹಲಗೇರಿ, ಹನುಮಂತಪ್ಪ ಕಬ್ಬಾರ, ದಿಳ್ಳೆಪ್ಪ ಸತ್ಯಪ್ಪನವರ, ಬಸವರಾಜ ಕೊಂಗಿ, ರಾಮಪ್ಪ ಸುಂಕಾಪುರ, ಕುಬೇರಪ್ಪ ಹುಲಿಹಳ್ಳಿ, ಬೀರೇಶ ಪೂಜಾರ, ಸಂಜೀವರಡ್ಡಿ ಹುಲಿಹಳ್ಳಿ, ಕಿರಣ ಪೂಜಾರ, ಹೇಮಪ್ಪ ಸುಂಕಾಪುರ, ವೆಂಕನಗೌಡ ಜೀವನಗೌಡ್ರ, ಲಿಂಗರಡ್ಡಿ, ನಾಗೇಂದ್ರಪ್ಪ ಪೂಜಾರ, ವೆಂಕಪ್ಪ ವಡೇರಹಳ್ಳಿ ಸೇರಿದಂತೆ ಹಲಗೇರಿ, ನಂದಿಹಳ್ಳಿ, ಅಂತರವಳ್ಳಿ, ಲಿಂಗದೇವರಕೊಪ್ಪ, ಹಾರೋಗೊಪ್ಪ ಮತ್ತಿತರೆ ಗ್ರಾಮಗಳ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಜಿಎಂಐಟಿ : ಸ್ಕಿಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಪ್ರೋಗ್ರಾಂ



ದಾವಣಗೆರೆ, ಏ. 19 - ನಗರದ ಜಿ.ಎಂ ತಾಂತ್ರಿಕ ಮಹಾವಿದ್ಯಾಲಯದ ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ದಾವಣಗೆರೆ ಪ್ರಾದೇಶಿಕ ಕೇಂದ್ರದ ಸಹಯೋಗದಲ್ಲಿ ಸ್ಕಿಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಪ್ರೋಗ್ರಾಂ ಅನ್ನು ಇದೇ ದಿನಾಂಕ 17 ರಿಂದ ಮೇ 2ರವರೆಗೆ ನಡೆಯಲಿದ್ದು, ಕಾರ್ಯಾಗಾರದಲ್ಲಿ ಮುಕ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ದಾವಣಗೆರೆ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಡಾ. ಸುಧಾಕರ ಹೊಸಹಳ್ಳಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಕೌಶಲ್ಯಾಭಿವೃದ್ಧಿ ತರಬೇತಿ ವಿಭಾಗದ ಸಂಯೋಜನಾಧಿಕಾರಿ ಜಿ.ಎಸ್. ಲೋಕೇಶ್ ಮತ್ತು ರವಿ ಉಪಸ್ಥಿತರಿದ್ದರು.

ಐಎಸ್ಇ ವಿಭಾಗದ ಮುಖ್ಯಸ್ಥರು ಹಾಗು ಕಾರ್ಯಕ್ರಮದ ಸಂಚಾಲಕ ಡಾ॥ ಬಿ.ಎಸ್. ಸುನಿಲ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಡಾ॥ ವೈ ವಿಜಯ ಕುಮಾರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತಾಧಿಕಾರಿ ವೈ.ಯು. ಸುಭಾಶ್‌ಚಂದ್ರ, ವಿದ್ಯಾರ್ಥಿಗಳು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಕು. ಕಾವ್ಯ ಹೆಗಡೆ ಸ್ವಾಗತ ಗೀತೆ ಹಾಡಿದರು. ಪ್ರೊ॥ ಫಿರೋಜ್ ಖಾನ್ ಮುಖ್ಯ ಅತಿಥಿಗಳ ಪರಿಚಯ ಹಾಗೂ ವಂದನಾರ್ಪಣೆ ನೆರವೇರಿಸಿದರು.

# ಕನಕ-ಅಂಬೇಡ್ಕರ್ ವೃತ್ತ ರಾಮಾಯಣ !






**ಹೆಚ್.ಸಿ. ಮೃತ್ಯುಂಜಯ ಪಾಟೀಲ್**

ನಿಜ, ನೀವು ಈವರೆಗೂ ವಾಲ್ಮೀಕಿ ರಾಮಾಯಾಣ ಎಂಬುದನ್ನು ಕೇಳಿದ್ದೀರಿ. ಆದರೆ ಇಂದು ಹೊನ್ನಾಳಿ ಪಟ್ಟಣದಲ್ಲಿ ನಡೆದ ಬೆಳವಣಿಗೆ ಕನಕ ಹಾಗೂ ಅಂಬೇಡ್ಕರ್ ವೃತ್ತ ರಾಮಾಯಣದಂತೆ ಕಂಡು ಬಂದಿದೆ.

ಕೊರೊನ ಸಂಕಷ್ಟಕಾಲದಲ್ಲಿ ಇದೇನಪ್ಪಾ? ಎಂಬ ಪ್ರಶ್ನೆ ಯಾರಿಗಾದರೂ ಮೂಡದಿರದು. ಕನಕ ವೃತ್ತ ಎಂದು ನಾಮಕರಣವಾಗಿದ್ದ ಟಿ.ಬಿ ವೃತ್ತಕ್ಕೆ ಅಂಬೇಡ್ಕರ್ ವೃತ್ತ ಎಂದು ಹೆಸರಿಡಲು ಮುಂದಾಗಿದ್ದೇ ಈ ಕಥೆಗೆ ನಾಂದಿಯಾಯಿತು.

ಹೊನ್ನಾಳಿ ದಲಿತ ಸಂಘರ್ಷ ಸಮಿತಿ ಅಂದುಕೊಂಡತೆ ಈ ದಿನ ನಡೆದಿದ್ದರೆ ಪಟ್ಟಣದಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ ಅವರು ಅಂಬೇಡ್ಕರ್ ಜಯಂತಿ ಸಭೆಯನ್ನು ಉದ್ಘಾಟಿಸಿ ಭಾಗವಹಿಸುತ್ತಿದ್ದರು. 16 ವ್ಯಕ್ತಿಗಳ ಸನ್ಮಾನ ಕಾರ್ಯಕ್ರಮವೂ ನಡೆಯುತ್ತಿತ್ತು. ಶನಿವಾರ ಹಾಗೂ ಭಾನುವಾರದ ದಿಢೀರ್ ಬೆಳವಣಿಗೆಯಿಂದಾಗಿ ಇದು ಸಾಧ್ಯವಾಗಲಿಲ್ಲ ಎಂಬುದು ಸತ್ಯ ಸಂಗತಿಯಾಗಿದೆ.

ತಾಲ್ಲೂಕು ಆಡಳಿತವು ಸಭೆ ನಡೆಯುವ ಕನಕ ರಂಗಮಂದಿರಕ್ಕೆ ಹಾಗೂ ಪಟ್ಟಣ ಪಂಚಾಯ್ತಿಯ ದ್ವಾರದ ಗೇಟಿಗೆ ಪ್ರತ್ಯೇಕ ಬೀಗ ಹಾಕಿದ್ದಲ್ಲದೆ, ಸಭೆಗೆ ಅನುಮತಿ ನೀಡದೆ, ಇಂದಿನ ಸಭೆಯ ಆಯೋಜಕರಿಬ್ಬರ ಮೇಲೆ ನೋಟಿಸ್ ಜಾರಿ ಮಾಡಿ ದೂರು ದಾಖಲಿಸಲು ಮುಂದಾದ ಬೆಳವಣಿಗೆ ನಡೆದಿದೆ.

ಇಂದಿನ ಅಂಬೇಡ್ಕರ್ ಜಯಂತಿ ಸಭೆ ನಡೆಯದೇ ಇರುವ ಬಗ್ಗೆ ಸಭೆ ಆಯೋಜಕರಾದ ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿಡಗೂರು ರುದ್ರೇಶ್ ಅವರು ಪ್ರತಿಕ್ರಿಯಿಸಿದ್ದು, ಇಂದು ಅಂಬೇಡ್ಕರ್ ಜಯಂತಿಯೊಂದಿಗೆ ಟಿ.ಬಿ ವೃತ್ತಕ್ಕೆ ಅಂಬೇಡ್ಕರ್ ವೃತ್ತ ಎಂಬುದಾಗಿ ನಾಮಕರಣ ಮಾಡಬೇಕೆಂದು ಅಂದುಕೊಂಡಿದ್ದೆವು. ತಾಲ್ಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಯು ಬಲವಂತದಿಂದ ತಡೆ ಹಿಡಿದಿದೆಯೇನೋ ಅನಿಸುತ್ತದೆ ಎಂದಿದ್ದಾರೆ.

ಸಭೆಗೆ ನೋಟಿಸ್‌ಗಳ ಮೇಲೆ ನೋಟಿಸ್ ನೀಡಿದ್ದು, ಸಭೆಯನ್ನು ಇನ್‌ಡೋರ್‌ನಲ್ಲಿ ಮಾಡಿ ಎನ್ನುತ್ತ ನನ್ನನ್ನೂ ಸೇರಿದಂತೆ, ಇಬ್ಬರ ಮೇಲೆ ದೂರು ದಾಖಲಿಸುವ ಪ್ರಯತ್ನವಾಗಿದೆ. ಅಂಬೇಡ್ಕರ್ ಜಯಂತಿಯೊಂದರ ಆಚರಣೆಯಾಗಿದ್ದರೆ ಅವಕಾಶ ನೀಡುತ್ತಿದ್ದರೇನೋ, ಅಂಬೇಡ್ಕರ್ ವೃತ್ತ ನಾಮಕರಣ ಎಂದಾಗಿದ್ದರಿಂದ ಹೀಗಾಗಿದೆ. ಕೋವಿಡ್ ನಿಯಮಕ್ಕೆ ತಲೆಬಾಗುವೆನಾದರೂ, ಇದು ಬಲವಂತವಾಗಿ ತಡೆಯುವ ಪ್ರಯತ್ನ ಅನಿಸುತ್ತದೆ ಎಂದಿದ್ದಾರೆ. ತಾವು ಈ ತಿಂಗಳ ಕೊನೆಗೆ ಮಾಜಿ ಸಚಿವ ಆಂಜನೇಯ ಅವರನ್ನು ಕರೆಸಿ ಸಭೆ ನಡೆಸುವುದಾಗಿ ಹೇಳಿದ್ದಾರೆ.

ಮಾ. 10ರ ಬುಧವಾರ ವೃತ್ತ ನಾಮಕರಣದ ಬಗ್ಗೆ ತಾಲ್ಲೂಕು ಆಡಳಿತದ ಗಮನಕ್ಕೆ ತರಲಾಗಿತ್ತು. ವೃತ್ತ ನಾಮಕರಣದ ವಿಷಯವಾಗಿ ಜನವರಿ 20ಕ್ಕೆ ತಹಶೀಲ್ದಾರರಿಗೆ ಮನವಿ, ಮಾರ್ಚ್ 16ಕ್ಕೆ ಪಟ್ಟಣ ಪಂಚಾಯಿತಿಗೆ ಮನವಿ, ಏಪ್ರಿಲ್ 6 ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿ ಚರ್ಚಿಸಿದ್ದು, ಯಾವುದೇ ಸ್ಪಷ್ಟ ಮಾಹಿತಿ ದೊರೆತಿರಲಿಲ್ಲ. ತಾಲ್ಲೂಕು ಆಡಳಿತ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿ ಆಚರಣೆ ದಿನ ತಾವು, 18 ರಂದು ಪ್ರತ್ಯೇಕವಾಗಿ ಸಮಿತಿಯಿಂದ ಜಯಂತಿ ಆಚರಿಸಿ ವೃತ್ತ ನಾಮಕರಣ ಮಾಡಿರುವುದಾಗಿ ಹೇಳಿ ಸಭೆ ಬಹಿಷ್ಕರಿಸಿ ಮರಳಿದ್ದೆ.

15 ರಂದು ತಾಲ್ಲೂಕು ಆಡಳಿತ ಈ ವಿಷಯವಾಗಿ ಪ್ರತ್ಯಕ ಸಭೆ ನಡೆಸಿದರೂ ಯಾವುದೇ ಅಂತಿಮ ತೀರ್ಮಾನ ಕೈಗೊಳ್ಳದೆ ಸಭೆ ಅಪೂರ್ಣಗೊಂಡಿತ್ತು. ಇಂದು ಸಹ ಸಭೆ ನಡೆಸಲಾಗಲಿಲ್ಲ ಎಂಬುದು ರುದ್ರೇಶ್ ಅಭಿಪ್ರಾಯ ವಾಗಿದೆ.

ಟಿಬಿ ವೃತ್ತಕ್ಕೆ ಕಡದಕಟ್ಟೆ ಪಂಚಾಯಿತಿಯು ಕನಕದಾಸ ವೃತ್ತ ಎಂದು ಈ ಹಿಂದೆಯೆ ನಾಮಕರಣ ಮಾಡಿತ್ತು. ಇದೀಗ ಹೊನ್ನಾಳಿ ಪುರಸಭೆಯಾಗಿದೆ.

ಒಟ್ಟಾರೆಯಾಗಿ ಒಂದು ವೃತ್ತದ ನಾಮಕರಣವು ಯಾವುದೇ ಜಾತಿ, ಜನಾಂಗ,ಧರ್ಮಕ್ಕೆ ಸೀಮಿತಗೊಳಿಸದೆ ತಾಲ್ಲೂಕು ಆಡಳಿತ ಹಾಗು ಚುನಾಯಿತ ಪ್ರತಿನಿಧಿಗಳು ಒಮ್ಮತದಿಂದ ಸಾಧಕ - ಬಾಧಕಗಳನ್ನು ಸಾರ್ವಜನಿಕವಾಗಿ ಚರ್ಚಿಸಿ, ಅಂತಿಮ ತಿರ್ಮಾನಕ್ಕೆ ಬರುವುದು ಒಳಿತು ಎಂಬುದು ಆಶಯವಾಗಿದೆ.

## ತೆಲಂಗಾಣ ಮುಖ್ಯಮಂತ್ರಿಗೆ ಕೊರೊನಾ ಸೋಂಕು

ಹೈದರಾಬಾದ್, ಏ. 19 – ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರಿಗೆ ಕೊರೊನಾ ಸೋಂಕಿರುವುದು ಸೋಮವಾರ ನಡೆಸಲಾದ ಟೆಸ್ಟ್‌ನಿಂದ ಕಂಡು ಬಂದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯ ಕಾರ್ಯದರ್ಶಿ ಸೋಮೇಶ್ ಕುಮಾರ್, ಮುಖ್ಯಮಂತ್ರಿ ಪ್ರತ್ಯೇಕವಾಗಿರುವಂತೆ ಸಲಹೆ ನೀಡಲಾಗಿದೆ. ಅವರು ತಮ್ಮ ತೋಟದ ಮನೆಯಲ್ಲಿದ್ದಾರೆ. ವೈದ್ಯರು ಅವರ ಆರೋಗ್ಯದ ಮೇಲೆ ನಿಗಾ ವಹಿಸಿದ್ದಾರೆ ಎಂದು ತಿಳಿಸಿದ್ದಾರೆ.

## ಬ್ರಿಟನ್ ಪ್ರಧಾನಿಯ ಭಾರತದ ಭೇಟಿ ರದ್ದು

ನವದೆಹಲಿ, ಏ. 19 – ದೇಶದಲ್ಲಿ ಕೊರೊನಾ ಪರಿಸ್ಥಿತಿ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಅವರು ಮುಂದಿನ ವಾರದ ಭಾರತ ಭೇಟಿಯನ್ನು ರದ್ದುಗೊಳಿಸಿದ್ದಾರೆ. ಕೊರೊನಾ ನಂತರ ಎರಡನೇ ಬಾರಿ ಅವರು ಭಾರತ ಭೇಟಿಯನ್ನು ರದ್ದುಗೊಳಿಸಿದ್ದಾರೆ. ಬ್ರಿಟನ್ ಪ್ರಧಾನಿ ಭಾರತದ ಭೇಟಿಯನ್ನು ಉಭಯ ದೇಶಗಳ ಪರಸ್ಪರ ಸಮ್ಮತಿಯೊಂದಿಗೆ ರದ್ದುಗೊಳಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಪ.ಬಂಗಾಳದಲ್ಲಿ ಶಾಲೆಗಳು ಬಂದ್

ಕೊಲ್ಕೊತಾ, ಏ. 19 – ಎಂಟು ಹಂತಗಳ ಚುನಾವಣೆ ನಡೆಯುತ್ತಿರುವ ಪಶ್ಚಿಮ ಬಂಗಾಳದಲ್ಲಿ ಕೊರೊನಾ ಪರಿಸ್ಥಿತಿ ಉಲ್ಬಣಿಸಿದ್ದು, ಎಲ್ಲಾ ಶಾಲೆಗಳನ್ನು ಸೋಮವಾರದಿಂದ ಮುಚ್ಚಲಾಗಿದೆ. ರಾಜಕೀಯ ಪಕ್ಷಗಳೂ ಸಹ ಮುಂದಿನ ದಿನಗಳಲ್ಲಿ ಬೃಹತ್ ಸಮಾವೇಶಗಳನ್ನು ನಡೆಸುವುದಿಲ್ಲ ಎಂದು ತಿಳಿಸಿವೆ.

ರಾಜ್ಯದಲ್ಲಿ ಸೋಮವಾರ ಒಂದೇ ದಿನ 8,426 ಸೋಂಕಿತರು ಕಂಡು ಬಂದಿದ್ದಾರೆ ಹಾಗೂ 38 ಜನ ಸಾವನ್ನಪ್ಪಿದ್ದಾರೆ. ಇದುವರೆಗಿನ ಅತಿ ಹೆಚ್ಚಿನ ಸೋಂಕು ಇದಾಗಿದೆ.

## ಕ್ಯಾಂಪಸ್ ಸಂದರ್ಶನ : ಆಯ್ಕೆ

ದಾವಣಗೆರೆ, ಏ. 19- ನಗರದ ಜಿ ಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಹೆಚ್‌ಸಿಎಲ್ ಕ್ಯಾಂಪಸ್ ಸಂದರ್ಶನದಲ್ಲಿ ಇಂಜಿನಿಯರಿಂಗ್‌ನ ಎಲ್ಲಾ ವಿಭಾಗಗಳ ಕೊನೆಯ ವರ್ಷದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಭಾಗದಿಂದ 16, ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಿಂದ 9, ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಿಂದ 7, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಿಂದ 6 ಮತ್ತು ಸಿವಿಲ್ ಇಂಜಿನಿಯರಿಂಗ್ ವಿಭಾಗದಿಂದ 2 ವಿದ್ಯಾ ರ್ಥಿಗಳು ಆಯ್ಕೆಯಾಗಿದ್ದಾರೆ.

# ಸಾರಿಗೆ ನೌಕರರ ಮೇಲೆ ದಬ್ಬಾಳಿಕೆ ಮಾಡದಿರುವಂತೆ ಮನವಿ



ಕೂಡ್ಲಿಗಿ

ಕೂಡ್ಲಿಗಿ, ಏ.18- ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ಮುಷ್ಕರ ನಡೆಸುತ್ತಿರುವ ಸಾರಿಗೆ ನೌಕರರ ಮೇಲೆ ದಬ್ಬಾಳಿಕೆ ಮಾಡದಿರುವಂತೆ ಕೂಡ್ಲಿಗಿ ಬ್ಲಾಕ್ ಕಾಂಗ್ರೆಸ್ ಸಮಿತಿಯು ಹೊಸಪೇಟೆ ವಿಭಾಗೀಯ ನಿಯಂತ್ರಣಾಧಿಕಾರಿ ಹಾಗೂ ಕೂಡ್ಲಿಗಿ ಘಟಕದ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದೆ.

ಕೂಡ್ಲಿಗಿ ಘಟಕದ ಅಧಿಕಾರಿಗಳು ಸಾರಿಗೆ ಕಾರ್ಮಿಕರಲ್ಲಿ ಭಯ ಹುಟ್ಟಿಸಿ ಕರ್ತವ್ಯಕ್ಕೆ ಕರೆತರುತ್ತಿದ್ದು, ಕುಟುಂಬ ವರ್ಗದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು ದೂರಿದ್ದಾರೆ.

ಬಲವಂತವಾಗಿ ಹೆದರಿಸಿ, ಬೆದರಿಸಿ ಕೆಲಸ ಮಾಡಿಸಿಕೊಳ್ಳುವುದು ಕಾನೂನಿಗೆ ವಿರುದ್ಧವಾಗಿದೆ. ಅಲ್ಲದೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಕೂಡ್ಲಿಗಿ ಘಟಕದ ಕೆಲ ನೌಕರರನ್ನು ಬೀದರ್, ಕಲಬುರಗಿ, ರಾಯಚೂರು ಮತ್ತಿತರೆಡೆ ವರ್ಗಾವಣೆ ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ.

ಅಧಿಕಾರಿಗಳು ಸರ್ವಾಧಿಕಾರ ಧೋರಣೆ ತಾಳಿದ್ದು, ನೌಕರರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸಿದ್ಧನಗೌಡ, ಪ.ಪಂ. ಸದಸ್ಯರಾದ ಕಾವಲಿ ಶಿವಪ್ಪ ನಾಯಕ, ಗಂಗಾ, ಕುಮಾರಸ್ವಾಮಿ, ಕಂಪ್ಯೂಟರ್ ರಾಘವೇಂದ್ರ, ಡಿ.ಹೆಚ್. ದುರುಗೇಶ್, ನಲ್ಲಮುತ್ತಿ ದುರುಗೇಶ್ ಮತ್ತಿತರರು ಆರೋಪಿಸಿದ್ದಾರೆ.


ಅಧಿಕಾರಿಗಳ ಸರ್ವಾಧಿಕಾರಿ ಧೋರಣೆ ಮುಂದುವರೆದರೆ, ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ.

## ಮಲೇಬೆನ್ನೂರಿನ ಧಾರ್ಮಿಕ ಆಚರಣೆಗಳಿಗೆ ನಿಷೇಧ



ಮಲೇಬೆನ್ನೂರು, ಏ.19.- ಕೊರೊನಾ ವೈರಸ್ 2 ನೇ ಅಲೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾ ರದ ಆದೇಶದಲ್ಲಿ ಪಟ್ಟಣದಲ್ಲಿ ಯಾವುದೇ ಧಾರ್ಮಿಕ ಆಚರಣೆಗಳನ್ನು ಆಚರಿಸ ದಂತೆ ಮಸೀದಿ, ದೇವಸ್ಥಾನಗಳ ಮುಖ್ಯಸ್ಥರಿಗೆ ಪುರಸಭೆ ಅಧಿಕಾರಿಗಳು ಸೂಚನೆ ನೀಡಿದರು. ಅಲ್ಲದೇ ಮದುವೆಗಳಿಗೆ ಅನುಮತಿ ಕಡ್ಡಾಯವಾಗಿರುತ್ತದೆ, ಅಂತ್ಯಕ್ರಿಯೆಗೆ 25ಕ್ಕೆ ಹೆಚ್ಚು ಜನ ಸೇರದಂತೆ ಮತ್ತು ಹೋಟೆಲ್-ಅಂಗಡಿಗಳಲ್ಲಿ ಹೆಚ್ಚು ಜನ ಒಮ್ಮೆಲೇ ಸೇರದಂತೆ ನೋಡಿಕೊಳ್ಳಿ ಎಂದು ಪುರಸಭೆ ಅಧಿಕಾರಿಗಳು ಪ್ರಚಾರ ಮಾಡಿದರು.

# ಅಂಬೇಡ್ಕರ್ ಜಯಂತಿ ನಾಟಕೀಯ ಆಚರಣೆ



ದಾವಣಗೆರೆ, ಏ.19- ಸಂವಿಧಾನ ಸುಟ್ಟು ಹಾಕಿದ್ದಲ್ಲದೇ, ಅದನ್ನು ಬದಲಾಯಿಸಲು ಮುಂದಾಗಿದ್ದವರು ಇದೀಗ ಅಂಬೇಡ್ಕರ್‌ಗೆ ಪುಷ್ಪಾರ್ಚನೆ ಮಾಡಿ ನಾಟಕೀಯವಾಗಿ ಜಯಂತಿ ಆಚರಿಸುತ್ತಿರುವುದು ದೇಶದ ಬಹುದೊಡ್ಡ ದುರಂತ ಎಂದು ಕಾರ್ಮಿಕ ಮುಖಂಡ, ಜಿಲ್ಲಾ ಸಿಪಿಐ ಕಾರ್ಯದರ್ಶಿ ಹೆಚ್.ಕೆ. ರಾಮಚಂದ್ರಪ್ಪ ಕಿಡಿ ಕಾರಿದರು.

ಅವರು, ಇಂದು ನಗರದ ಅಶೋಕ ರಸ್ತೆಯಲ್ಲಿನ ಕಾಮ್ರೆಡ್ ಪಂಪಾಪತಿ ಭವನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಜಿಲ್ಲಾ ಮಂಡಳಿಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಪ್ರಪಂಚದಲ್ಲಿಯೇ ಶ್ರೇಷ್ಠ ಗ್ರಂಥವಾಗಿರುವ ಸಂವಿಧಾನವನ್ನು ಸುಟ್ಟುಹಾಕಿ, ಹಿಂದುತ್ವದ ಆಧಾರದಲ್ಲಿ ಸಂವಿಧಾನ ತರುತ್ತೇವೆ ಎಂದವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಭಾಷಣ ಮಾಡುತ್ತಿರುವುದು ನಾಟಕೀಯ ಎಂದು ಬೇಸರ ವ್ಯಕ್ತಪಡಿಸಿದರು.

ತಮಗಾದ ಹಿಂಸೆ, ದಬ್ಬಾಳಿಕೆ, ದೌರ್ಜನ್ಯ ಇವೆಲ್ಲವನ್ನೂ ಸಹಿಸಿಕೊಂಡು ಅರ್ಥಶಾಸ್ತ್ರ, ರಾಜನೀತಿ ಸೇರಿದಂತೆ ಹತ್ತಾರು ವಿಷಯಗಳಲ್ಲಿ ಪದವಿ ಪಡೆದುಕೊಂಡು ಡಾಕ್ಟರೇಟ್ ಪಡೆದರು. ಕಾರ್ಮಿಕ ಸಚಿವರಾಗಿ, ಕಾನೂನು ಸಚಿವರಾಗಿ, ತಮ್ಮ ನೇತೃತ್ವದಲ್ಲಿ 295 ಜನರ ಸಮಿತಿ ರಚಿಸಿ ಸಂವಿಧಾನ ಹೊರತರಲಾಯಿತು. ಇಂತಹ ಅಂಬೇಡ್ಕರ್ ಅವರಿಗೆ ಅಂದಿನ ಸರ್ಕಾರ ಅನಿವಾರ್ಯವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು ಎಂದು ಹೇಳಿದರು.

ಸಮಾಜವಾದಿ, ಸಮತಾವಾದಿ ಸಮಾಜ ನಿರ್ಮಾಣವಾಗಬೇಕೆಂಬ ಅಂಬೇಡ್ಕರರ ಕನಸು ಇದುವರೆಗೂ ನನಸಾಗಿಲ್ಲ. ಬದಲಾಗಿ, ಅವರು ರಚಿಸಿರುವ ಸಂವಿಧಾನಕ್ಕೆ ಕುತ್ತು ತರಲಾಗುತ್ತಿದ್ದು, ಇದರ ವಿರುದ್ಧ ದನಿಯೆತ್ತುವವರಿಗೆ ಬೇರೆ ತೆರನಾದ ಪಟ್ಟ ಕಟ್ಟಿ ಮೂಲೆಗುಂಪು ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ ಜಿಲ್ಲಾ ಸಹಕಾರ್ಯದರ್ಶಿ ಆನಂದರಾಜ್ ವಹಿಸಿದ್ದರು, ಆವರಗೆರೆ ಚಂದ್ರು, ರಾಘವೇಂದ್ರ ನಾಯರಿ, ಡಿ.ಎಸ್.ನಾಗರಾಜ್, ಎಂ.ಬಿ. ಶಾರದಮ್ಮ, ರುದ್ರಮ್ಮ, ಸರೋಜಮ್ಮ, ವಿಶಾಲಾಕ್ಷಮ್ಮ, ಆವರಗೆರೆ ವಾಸು, ಐರಣಿ ಚಂದ್ರು, ಪಿ.ಷಣ್ಮುಖಸ್ವಾಮಿ, ಆವರಗೆರೆ ಚಂದ್ರು ಇತರರು ಇದ್ದರು.

**WANTED**

1) Required Cashier (Male) for Textile Business with Basic Knowledge of Managing and Cash Handling.

2) Accountant for Data entry work.

Salary Negotiable. Interested can Apply with proper Resume along with Photo Attested.

**ASHUJI DISTRIBUTORS**
# 323, Binny Company Road, Davangere.

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಅಶೋಕ್. ಎಸ್. ಬಿನ್ ಲೇ॥ ಷಡಾಕ್ಷರಪ್ಪ,** ವಾಸ: # 816/6, 2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ (ಮೊಬೈಲ್ ನಂ: 9964540555) ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :

ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಆಸ್ತಿಯ ಮಾಲೀಕರಾದ **ಶ್ರೀ ಗಣೂರಾಜ ಗುಜ್ಜಾರ ಬಿನ್ ಶಿವಶಂಕರ್‌ರಾವ್,** ವಾಸ : # 446/1, ಲಾಯರ್ ರಸ್ತೆ, ಕೆ.ಬಿ.ಬಡಾವಣೆ, ದಾವಣಗೆರೆ. ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಗಣೂರಾಜ ಗುಜ್ಜಾರ್ ಇವರು ಷೆಡ್ಯೂಲ್ ಸೊತ್ತನ್ನು ಟಿ.ಎಸ್.ವಸುಪಾಲ್ ಬಿನ್ ಲೇಟ್ ಸನತ್ ಕುಮಾರ್ ಇವರಿಂದ ದಿನಾಂಕ : 10-03-2021 ರಂದು ಎಸ್.ಆರ್.ನಂ : 19996/2020-21 ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ಸದರಿ ಷೆಡ್ಯೂಲ್ ಆಸ್ತಿಯ ಬಗ್ಗೆ ಸಾರ್ವಜನಿಕರು ಯಾರೇ ಆಗಲಿ ತಂಟೆ ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ ಒಂದು ವಾರದೊಳಗಾಗಿ ಈ ಕೆಳಕಂಡ ವಕೀಲರನ್ನಾಗಲೀ ಅಥವಾ ನನ್ನ ಕಕ್ಷಿದಾರರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಒಂದು ವಾರದೊಳಗೆ ಯಾವುದೇ ರೀತಿಯ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಆಸ್ತಿಯನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

**ಷೆಡ್ಯೂಲ್ :** ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ಆವರಗೆರೆ ವಿಭಾಗದ, ಜೈನ್ ಕಾಲೇಜ್ ಹತ್ತಿರ ಬರತಕ್ಕ ಸೈಟ್ ನಂ.01(ಒಂದು), ಮಹಾನಗರ ಪಾಲಿಕೆಯ ಡೋರ್ ನಂ.409/1-1, ವಿಸ್ತೀರ್ಣ: (48+90)/2 X 68 ಅಡಿ 4692 ಚದರ ಅಡಿವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:- **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಸೈಟ್ ನಂ.2, **ಉತ್ತರಕ್ಕೆ:** ಬೇರೆಯವರ ಜಮೀನು, **ದಕ್ಷಿಣಕ್ಕೆ:** ರಸ್ತೆ. ಈ ಮಧ್ಯ ಇರುವ ಖಾಲಿ ನಿವೇಶನ.

**ಸಂಪರ್ಕಿಸಬೇಕಾದ ವಿಳಾಸ:**
**ಶ್ರೀ ಆರ್.ಟಿ. ವಿನಯ್ ಕುಮಾರ್**
ವಕೀಲರು, ಡೋರ್ ನಂ.82/18, 1ನೇ ಮಹಡಿ,
ಪಿ.ಬಿ.ರಸ್ತೆ, ದಾವಣಗೆರೆ. ಮೊ. ನಂ. 98445 97838

**(ಆರ್.ಟಿ. ವಿನಯ್ ಕುಮಾರ್)**
ವಕೀಲರು

**ಕಲಿಯಿರಿ-ಸಂಪಾದಿಸಿ**
**LEARN-N-EARN**
ಪಾರ್ಟ್ ಟೈಮ/ಫುಲ್ ಟೈಮ್ ಪಿ.ಯು.ಸಿ. ಪಾಸಾದ ಯಾವುದೇ ವಯಸ್ಸಿನವರು ತಿಂಗಳಿಗೆ ಕನಿಷ್ಟ 25 ರಿಂದ 30 ಸಾವಿರ ಸಂಪಾದಿಸಿ

**ನ್ಯೂರೋಥೆರಫಿ ಚಿಕಿತ್ಸೆ**

**100% ಔಷಧಿರಹಿತ ಮತ್ತು ನಿಶ್ಚಿತ ಪರಿಹಾರ**

ನ್ಯೂರೋಥೆರಪಿ ಚಿಕಿತ್ಸಾ ಪದ್ಧತಿಯು ಅತ್ಯಂತ ವೈಜ್ಞಾನಿಕ ಭಾರತೀಯ ಪುರಾತನ ಚಿಕಿತ್ಸಾ ಪದ್ಧತಿ ಆಗಿದ್ದು, ಯಾವುದೇ ಕಾಯಿಲೆಗಳಿಗೆ ಔಷಧಿ ರಹಿತ ಸಾಧನ (ಉಪಕರಣಗಳು) ಇಲ್ಲದೆ ಚಿಕಿತ್ಸೆ ನೀಡಬಹುದು. ಸುರಕ್ಷಿತವಾಗಿರುವ ಚಿಕಿತ್ಸೆಯಾಗಿದೆ.

- ನಾಡಿನ ಯಾವುದೇ ನಗರ, ಪಟ್ಟಣ, ಹಳ್ಳಿಗಳಲ್ಲಿ ನಮ್ಮ ಸಂಸ್ಥೆಯ ಸಹಕಾರದೊಂದಿಗೆ ಚಿಕಿತ್ಸಾಲಯ ಪ್ರಾರಂಭಿಸಬಹುದು.
- ತಮ್ಮ ಮನೆಯ ಸದಸ್ಯರಿಗೆ ಮನೆಯಲ್ಲಿಯೇ ಚಿಕಿತ್ಸೆ ನೀಡಬಹುದಾಗಿದೆ.
- ಅತ್ಯಂತ ಕಡಿಮೆ ತರಬೇತಿ ಶುಲ್ಕದಲ್ಲಿ ಕಲಿಯಬಹುದಾಗಿದೆ.



ಆಸಕ್ತರು ಸಂಪರ್ಕಿಸಿ : ಅಶೋಕ್ ವಿ.ಕೆ., ಎನ್.ಡಿ. ನ್ಯೂರೋಥೆರಪಿಸ್ಟ್
**ಕರ್ನಾಟಕ ನ್ಯೂರೋಥೆರಫಿ ಫೌಂಡೇಶನ್**
ನಂ. 2000/4/5, ಎಂ.ಸಿ. ಮೋದಿ ರೋಡ್, ಮೋದಿ ಕಾಂಪೌಂಡ್ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
ಮೊ : 99726 00713, 94827 31081, ಫೋ. : 08192 220480

# ಕೊರೊನಾ: ಸರ್ಕಾರದಿಂದ ವೈಫಲ್ಯ ಮುಚ್ಚಿಟ್ಟುಕೊಳ್ಳುವ ಯತ್ನ



ಬೆಂಗಳೂರು, ಏ. 19 - ಕೊರೊನಾ ಎರಡನೇ ಅಲೆ ದಿನದಿಂದ ದಿನಕ್ಕೆ ಮಾರಣಾಂತಿಕವಾಗುತ್ತಿದ್ದು, ಸೋಂಕು ಹರಡುವುದನ್ನು ತಡೆಯಲಿಕ್ಕಾಗದ ರಾಜ್ಯ ಬಿಜೆಪಿ ಸರ್ಕಾರ, ಜನತೆಯ ಮುಂದೆ ಬೆತ್ತಲಾಗುತ್ತಿದೆ, ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳುವ ವಿಫಲ ಪ್ರಯತ್ನದಲ್ಲಿ ತೊಡಗಿದೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ಕೊರೊನಾದಿಂದ ರಕ್ಷಿಸಿಕೊಳ್ಳಲು ಜನತೆಗೆ ನಿಯಮ-ನಿರ್ಬಂಧ-ಮಾರ್ಗಸೂಚಿಗಳ ಉಪದೇಶ ಮಾಡುವುದರ ಜೊತೆಗೆ, ಕೊರೊನಾ ಎದುರಿಸಲು ಬಿಜೆಪಿ ಸರ್ಕಾರ ಏನು ಮಾಡಿದೆ ಎನ್ನುವುದನ್ನು ಜನತೆಗೆ ತಿಳಿಸಲು ತಕ್ಷಣ ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೊರೊನಾ ಸೋಂಕಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ, ಖಾಸಗಿ ಆಸ್ಪತ್ರೆಗಳ ದುಬಾರಿ ಶುಲ್ಕ ಭರಿಸವ ಶಕ್ತಿ ಜನರಿಗೆ ಇಲ್ಲ. ಆಮ್ಲಜನಕದ ದಾಸ್ತಾನಿಲ್ಲ, ರೆಮಿಡಿಸಿವಿರ್ ನಂತಹ ಜೀವರಕ್ಷಕ ಔಷಧಿಯ ಕೊರತೆ ಇದೆ ಎಂದವರು ಹೇಳಿದ್ದಾರೆ.

ವರ್ಷದ ಹಿಂದೆ ಮೊದಲ ಬಾರಿ ಕೊರೊನಾ ದಾಳಿ ಇಟ್ಟಾಗ ಅದು ಅನಿರೀಕ್ಷಿತ ಆಘಾತ. ಒಂದು ವರ್ಷದ ಅನುಭವದಿಂದ ರಾಜ್ಯ ಸರ್ಕಾರ ಕೊರೊನಾ ಎದುರಿಸಲು ತನ್ನನ್ನು ಇನ್ನಷ್ಟು ಸಜ್ಜುಗೊಳಿಸಬೇಕಾಗಿತ್ತು. ಕೊರೊನಾ ವನ್ನೂ ತನ್ನ ಭ್ರಷ್ಟತೆಗೆ ಬಳಸಿಕೊಂಡ ಬಿಜೆಪಿ ಸರ್ಕಾರ ಈಗ ಕೈಚೆಲ್ಲಿ ಕೂತಿದೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ನು ಸಚಿವರು ಮತ್ತು ಆಡಳಿತ ಪಕ್ಷದ ಶಾಸಕರೇ ಬಹಿರಂಗವಾಗಿ ಉಲ್ಲಂಘಿಸುತ್ತಿದ್ದಾರೆ. ಸಚಿವರ ಮೇಲಾಗಲೀ, ಶಾಸಕರ ಮೇಲಾಗಲೀ ನಿಯಂತ್ರಣವೇ ಇಲ್ಲದೆ ನಿರ್ಮಾಣಗೊಂಡಿರುವ ಅರಾಜಕತೆಯೇ ಇಂದಿನ ದುಸ್ಥಿತಿಗೆ ಕಾರಣ ಎಂದವರು ತರಾಟೆಗೆ ತೆಗೆದುಕೊಂಡರು.

ದುರಾಡಳಿತ, ಭ್ರಷ್ಟಾಚಾರದ ಪರಿಣಾಮ ಜನ ಗೋಳಾಡಿಕೊಂಡು ಹಾದಿ ಬೀದಿಯಲ್ಲಿ ಜೀವ ಬಿಡುತ್ತಿದ್ದಾರೆ, ನಿಮ್ಮ ಕಣ್ಣಿಗೆ ಕಾಣುತ್ತಿಲ್ಲವೇ? ಈ ಸಾವುಗಳಿಗೆ ಬಿಜೆಪಿಯೇ ನೇರ ಹೊಣೆ ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

# ಹರಪನಹಳ್ಳಿ: ಕುರಿ ವ್ಯಾಪಾರ ಸ್ಥಗಿತ



ಹರಪನಹಳ್ಳಿ, ಏ.19- ಕೊರೊನಾ ಕಾರಣದಿಂದ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ಜರುಗುವ ಕುರಿ ಮತ್ತು ಮೇಕೆ ವ್ಯಾಪಾರವನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಎ.ಕೆ. ವೀರಣ್ಣ ತಿಳಿಸಿದ್ದಾರೆ.

ಪಟ್ಟಣದ ಕೊಟ್ಟೂರು ರಸ್ತೆಯ ಅಡವಿಹಳ್ಳಿ ಕ್ರಾಸ್ ಹತ್ತಿರ ನಡೆಯುವ ಕುರಿ ಸಂತೆಯನ್ನು ಏ.30 ರವರೆಗೆ ಸ್ಥಗಿತಗೊಳಿ ಸಲು ಆದೇಶಿಸಲಾಗಿದೆ. ಕೋವಿಡ್ ನಿಯಮಗಳನ್ನು ಯಾವುದೇ ವ್ಯಕ್ತಿಗಳು ಉಲ್ಲಂಘಿಸಿದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

# ನಿವೃತ್ತ ಸ್ಟಾಫ್ ನರ್ಸ್ ಮನೆಗೆ ಕನ್ನ

ದಾವಣಗೆರೆ, ಏ.19- ಮನೆ ಬೀಗ ಮುರಿದು ಕನ್ನ ಹಾಕಿರುವ ಕಳ್ಳರು, ಬೆಳ್ಳಿ - ಬಂಗಾರವನ್ನು ದೋಚಿರುವ ಘಟನೆ ಸ್ಥಳೀಯ ಜಯನಗರ 'ಎ' ಬ್ಲಾಕ್ ನ ರೆಡ್ಡಿ ಬಿಲ್ಡಿಂಗ್ ಬಳಿ ನಡೆದಿದೆ.

ನಿವೃತ್ತ ಸ್ಟಾಫ್ ನರ್ಸ್ ರಾಧಾ ಎಂಬುವರು ಶನಿವಾರ ತಮ್ಮ ಮನೆಗೆ ಬೀಗ ಹಾಕಿಕೊಂಡು ಊರಿಗೆ ಹೋಗಿದ್ದರು. ಮನೆಗೆ ಬೀಗ ಹಾಕಿರುವುದನ್ನು ಗಮನಿಸಿರುವ ಕಳ್ಳರು, ಆಯುಧದಿಂದ ಬಾಗಿಲು ಮೀಟಿ ಒಳನುಗ್ಗಿ ಮೂರುವರೆ ಕೆಜಿ ಬೆಳ್ಳಿ ಮತ್ತು 49 ಗ್ರಾಂ ಬಂಗಾರವನ್ನು ಕಳವು ಮಾಡಿದ್ದಾರೆ.

ಇಂದು ಕಳ್ಳತನ ಬೆಳಕಿಗೆ ಬಂದಿದ್ದು, ಕೆಟಿಜೆ ನಗರ ಪೊಲೀಸರು ಘಟನಾ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಶ್ವಾನ ದಳ ಹಾಗೂ ಬೆರಳಚ್ಚು ತಂಡ ಪರಿಶೀಲಿಸಿದೆ. 10 ಕೆಜಿ ಬೆಳ್ಳಿ ಮತ್ತು 2 ಕೆಜಿಯಷ್ಟು ಚಿನ್ನವನ್ನು ಈಕೆ ಸೇಫ್ಟಿ ಲಾಕರ್ ನಲ್ಲಿಟ್ಟಿದ್ದರಿಂದ ಕಳ್ಳರ ಪಾಲಾಗದೇ ಉಳಿದಿವೆ. ಸುರಕ್ಷಿತವಾದ ಡೋರ್ ಲಾಕ್ ಇಲ್ಲ. ಸಿಸಿಟಿವಿಯನ್ನಾಗಲೀ ಅಳವಡಿಸಿದ್ದರೆ ಕಳ್ಳರ ಸುಳಿವು ಪತ್ತೆಗೆ ಅನುಕೂಲವಾಗುತ್ತಿತ್ತು ಎನ್ನುತ್ತಾರೆ ಪೊಲೀಸರು.

# ನೂತನ ಕಲಿಕಾ ವಿಧಾನ, ಗುಣಾತ್ಮಕ ಶಿಕ್ಷಣ

## ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಿ ಸೈ ಎನಿಸಿಕೊಂಡ ಎಲೆಬೇತೂರು ಸರ್ಕಾರಿ ಶಾಲೆ







ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಸರ್ಕಾರಿ ಶಾಲೆಯ ಸೈನ್ಸ್ ಕಾರ್ನರ್ ಕೊಠಡಿಯ ಒಳ ನೋಟ, ಕಲಿಕಾ ಚಾರ್ಟ್ ತಯಾರಿಸುತ್ತಿರುವ ಶಿಕ್ಷಕರು

ದಾವಣಗೆರೆ, ಏ.19- ಖಾಸಗಿ ಶಾಲೆಗಳ ಪೈಪೋಟಿ ನಡುವೆಯೂ ಸರ್ಕಾರಿ ಶಾಲೆಯೊಂದು ಜನಪ್ರಿಯತೆ ಗಳಿಸುವುದು, ಮಕ್ಕಳ ದಾಖಲಾತಿ ಹೆಚ್ಚಿಸಿಕೊಳ್ಳುವುದು ಸುಲಭದ ಮಾತಲ್ಲ. ಆದರೆ ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಸರ್ಕಾರಿ ಶಾಲೆಯೊಂದು ಅಂತಹ ಸಾಧನೆ ಮಾಡಿದೆ.

ಗ್ರಾಮದಲ್ಲಿ ಮೂರು ಖಾಸಗಿ ಶಾಲೆಗಳು ದಾಖಲಾತಿ ಹೆಚ್ಚಿಸಿಕೊಳ್ಳಲು ಪೈಪೋಟಿ ನೀಡುತ್ತಿವೆ. ಅದರ ನಡುವೆಯೂ ಸರ್ಕಾರಿ ಪ್ರಾಥಮಿಕ ಶಾಲೆ ಪ್ರಸಕ್ತ ವರ್ಷ 40ಕ್ಕೂ ಹೆಚ್ಚು ಮಕ್ಕಳನ್ನು ದಾಖಲಿಸಿಕೊಂಡಿದೆ. ಅಷ್ಟೇ ಅಲ್ಲ, ಗ್ರಾಮಸ್ಥರು ಹಾಗೂ ಪೋಷಕರಿಂದ ಹೆಚ್ಚಿನ ಒಲವು ಗಳಿಸಿದೆ.

ಉತ್ತಮವಾದ ಶೈಕ್ಷಣಿಕ ವಾತಾವರಣ, ನೂತನ ಕಲಿಕಾ ವಿಧಾನ, ಮಕ್ಕಳ ಮೇಲೆ ಶಿಕ್ಷಕರು ತೋರುವ ಪ್ರೀತಿ, ಕಳೆದ ಕೆಲ ವರ್ಷಗಳಿಂದ ಗುಣಮಟ್ಟದ ಶಿಕ್ಷಣ ಹೀಗೆ ಹಲವು ಕಾರಣಗಳಿಂದಾಗಿ ಶಾಲೆ ಮೆಚ್ಚುಗೆ ಗಳಿಸುತ್ತಿದೆ.

ಸರ್ಕಾರಿ ಶಾಲೆಯೆಂದರೆ ಮೂಗು ಮುರಿಯುವ ಪೋಷಕರೇ ಹೆಚ್ಚು. ಅಲ್ಲಿ ಮಕ್ಕಳಿಗೆ ಬೇಕಾದ ಮೂಲಸೌಕರ್ಯಗಳು, ಶುಚಿತ್ವ, ಉತ್ತಮ ಪರಿಸರ ಮತ್ತು ಶಿಸ್ತು ಇರುವುದಿಲ್ಲ ಎಂಬುದು ಪೋಷಕರ ಮನೋಭಾವ. ಈ ಕಾರಣಕ್ಕೆ ಮಕ್ಕಳಿಗೆ ಕಾನ್ವೆಂಟ್ ಅಥವಾ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸುತ್ತಾರೆ. ಆದರೆ ಪೋಷಕರಲ್ಲಿರುವ ಇಂತಹ ಧೋರಣೆಯನ್ನು ಬದಲಾಯಿಸುವ ನಿಟ್ಟಿನಲ್ಲಿ ಈ ಶಾಲೆ ಪ್ರಯತ್ನ ಮಾಡುತ್ತಿದೆ. ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದಂತೆ ಈ ಸರ್ಕಾರಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ ಎನ್ನುವುದು ಗ್ರಾಮಸ್ಥರ ಅಭಿಪ್ರಾಯ.

**ಕಾರ್ನರ್‌ಗಳೇ ವಿಶೇಷ:** ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ ಹೀಗೆ ಎಲ್ಲಾ ವಿಷಯಗಳಿಗೂ ಒಂದೊಂದು ಕಾರ್ನರ್ ಮಾಡಲಾಗಿದೆ. ಆ ಕೊಠಡಿಗಳಲ್ಲಿ ಆಯಾ ವಿಷಯಗಳಿಗೆ ಸಂಬಂಧಪಟ್ಟ ಕಲಿಕೆಯನ್ನು ಮಕ್ಕಳಿಗೆ ಮನ ಮುಟ್ಟುವಂತೆ ಸರಳವಾಗಿ ತಿಳಿಸಿಕೊಡಲು ಅಗತ್ಯವಾದ ಬಣ್ಣದ ಚಿತ್ರಗಳು, ಸಾಮಗ್ರಿಗಳಿವೆ. ಇದರಿಂದಾಗಿ ಮಕ್ಕಳು ಕಲಿಕೆಯಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳುತ್ತಾರೆ ಎನ್ನುತ್ತಾರೆ ಶಿಕ್ಷಕಿ ಆರ್. ಅನ್ನಪೂರ್ಣ.

ಕೇವಲ ಪುಸ್ತಕದ ವಿಷಯವನ್ನೇ ಹೇಳುತ್ತಿದ್ದರೆ ಮಕ್ಕಳಲ್ಲಿ ಅಷ್ಟಾಗಿ ಆಸಕ್ತಿ ಮೂಡುವುದಿಲ್ಲ. ಆದರೆ ಮಕ್ಕಳು ನಮ್ಮ ಶಾಲೆಯ ಆಯಾ ವಿಷಯದ ಕಾರ್ನರ್ ಕೊಠಡಿ ಪ್ರವೇಶಿಸಿದ ಕೂಡಲೇ ಅವರಲ್ಲಿನ ಆಸಕ್ತಿ ಇಮ್ಮಡಿಯಾಗುತ್ತದೆ. ನಮ್ಮಲ್ಲಿನ ಕಲಿಕಾ ವಿಧಾನ ತಿಳಿದು, ಮೆಚ್ಚುಗೆ ವ್ಯಕ್ತಪಡಿಸಿದ ಪೋಷಕರು, ಖಾಸಗಿ ಶಾಲೆಯಲ್ಲಿ ಓದಿಸುತ್ತಿದ್ದ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸುತ್ತಿದ್ದಾರೆ ಎಂದರು ಮುಖ್ಯೋಪಾಧ್ಯಾಯ ಎಂ. ಶಿವಮೂರ್ತಿ. ಒಟ್ಟಾರೆ ಇಲ್ಲಿನ ಸರ್ಕಾರಿ ಶಾಲೆ ಇತರೆ ಶಾಲೆಗಳಿಗೆ ಮಾದರಿಯಾಗಿದೆ.

ಅಂದಹಾಗೆ ಶಾಲೆಗೆ ದಾನಿಗಳ ಕೊಡುಗೆಯೂ ಉತ್ತಮವಾಗಿದೆ. ಜಿಲ್ಲಾ ಪಂಚಾಯ್ತಿ ವತಿಯಿಂದ 10 ಸಾವಿರ ರೂ. ಮೌಲ್ಯದ 10 ಡೆಸ್ಕ್‌ಗಳನ್ನು ನೀಡಲಾಗಿದೆ. ಇನ್ನು ನಗರದ ರಾಧಾಕೃಷ್ಣ ಜ್ಯುವೆಲರ್ಸ್ ಮಾಲೀಕರು 8 ಸಾವಿರ ರೂ. ಮೌಲ್ಯದ 8 ಡೆಸ್ಕ್‌ಗಳನ್ನು ನೀಡಿದ್ದಾರೆ. ಜಿ.ಪಂ. ಸದಸ್ಯರಾಗಿದ್ದ ರೇಣುಕಮ್ಮ ಕರಿಬಸಪ್ಪ ಅವರು 30 ಸಾವಿರ ರೂ. ನೀಡಿದ್ದರೆ, ತಾ.ಪಂ. ಸದಸ್ಯರಾದ ಸಂಗನಗೌಡ್ರು 13 ಸಾವಿರ ಹಾಗೂ ಕೊಟ್ರೇಶ್, ಮಂಜು, ನವೀನ್ 12.500 ಸೇರಿದಂತೆ ಹಲವಾರು ದಾನಿಗಳು ಧನ ಸಹಾಯ ಮಾಡಿದ್ದಾರೆ.

ಶಾಲೆಗೆ ಶುದ್ಧ ಕುಡಿಯುವ ನೀರಿನ ಘಟಕ ಅಗತ್ಯವಿದ್ದು, ಗ್ರಾಮ ಪಂಚಾಯ್ತಿ ವತಿಯಿಂದ ನೀರಿನ ಘಟಕ ಸ್ಥಾಪಿಸಿ ಕೊಡುವ ಭರವಸೆ ಸಿಕ್ಕಿದೆ. ಶಾಲಾ ಆವರಣವನ್ನು ಮತ್ತಷ್ಟು ಹಸಿರನ್ನಾಗಿಸಲು ಕೈ ತೋಟ ನಿರ್ಮಿಸಬೇಕಿದೆ. ಗಿಡಗಳನ್ನು ರಕ್ಷಿಸಿಕೊಳ್ಳಲು ಶಾಲಾ ಕಾಂಪೌಂಡ್ ಎತ್ತರ ಹೆಚ್ಚಿಸಿಕೊಳ್ಳುವ ಅಗತ್ಯವಿದೆ. ಇದೂ ಸೇರಿದಂತೆ ಶಾಲೆಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಮತ್ತಷ್ಟು ದಾನಿಗಳ ಸಹಕಾರವೂ ಅಗತ್ಯ ಎಂದು ಹೇಳಿದರು.

ಇತ್ತೀಚೆಗೆ ಶಾಲೆಯೊಂದರಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ (ಅಭಿವೃದ್ಧಿ) ಹೆಚ್.ಕೆ. ಲಿಂಗರಾಜು ಅವರೂ ಸಹ ಶಾಲೆಯ ವಾತಾವರಣ ಕಂಡು ತೀವ್ರ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಪತ್ರಿಕೆಯೊಂದಿಗೆ ಮಾತನಾಡಿದ ಗ್ರಾಮದ ಮುಖಂಡರೂ, ಶಿಕ್ಷಣ ಪ್ರೇಮಿ ಹಾಗೂ ಶಾಲೆಯ ಎಸ್‌ಡಿಎಂಸಿ ನಾಮ ನಿರ್ದೇಶಿತ ಸದಸ್ಯ ಎಂ.ಷಡಾಕ್ಷರಪ್ಪ ಅವರು ಶಾಲೆಯಲ್ಲಿನ ಗುಣಮಟ್ಟದ ಶಿಕ್ಷಣವನ್ನು ಶ್ಲಾಘಿಸಿದರು.

**1948ರಲ್ಲಿ ಸ್ಥಾಪನೆಯಾದ ಶಾಲೆ:** 1948ರಲ್ಲಿ ಕಿರಿಯ ಪ್ರಾಥಮಿಕ ಶಾಲೆಯಾಗಿ ಆರಂಭವಾಗಿ, 1977ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಪರಿವರ್ತನೆಯಾಯಿತು. ಪ್ರಸ್ತುತ ಒಂದರಿಂದ 7ನೇ ತರಗತಿ ವರೆಗೆ 237 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, 11 ಜನ ಶಿಕ್ಷಕರಿದ್ದಾರೆ.

ಮುಖ್ಯೋಪಾಧ್ಯಾಯರಾಗಿ ಎಂ. ಶಿವಮೂರ್ತಿ, ಶಿಕ್ಷಕರುಗಳಾಗಿ ಬಿ.ಸುಜಾತ, ಜಿ.ಎನ್. ಸುಮಿತ್ರ, ಜಿ.ವಾಣಿ, ಆರ್. ಅನ್ನಪೂರ್ಣ, ಜೆ.ಟಿ. ಕವಿತ, ಡಿ.ಎಂ. ಗಣೇಶಯ್ಯ, ಎನ್. ಗಂಗಮ್ಮ, ಹೆಚ್. ಶಿಲ್ಪ, ಐ.ಎಂ. ಶಿವಕುಮಾರ್, ದೈಹಿಕ ಶಿಕ್ಷಕರಾಗಿ ಎ.ಆರ್. ಗೋಪಾಲಪ್ಪ ಕಾರ್ಯ ನಿರ್ವಹಿಸುತ್ತಿದ್ದು, ಇವರೆಲ್ಲರ ಹೊಂದಾಣಿಕೆಯ ಕಾರ್ಯವೈಖರಿಯೂ ಸಹ ಶಾಲೆ ಉತ್ತಮ ಹೆಸರು ಮಾಡಲು ಸಾಧ್ಯವಾಗಿದೆ ಎನ್ನಬಹುದು.




- ಆರ್.ಟಿ.

## ಇಲ್ಲ..ಇಲ್ಲ... ಇಲ್ಲಾ!!!




**ಏನಪಾ ಉಗಾದಿ ಹಬ್ಬ ಜೋರಾಗಿತ್ತಾ?**

ಇಲ್ರೋ ಮಾರಾಯ. ಮೋಡ ಕವಿದ ವಾತಾವರಣ ಹಬ್ಬದ ದಿನ ಚಂದ್ರ ಕಾಣಲಿಲ್ಲ. ಹಿಂಗಾಗಿ ಮನೇಲಿ ಹೋಳಿಗೆ ಮಾಡಲಿಲ್ಲ.

**ಹೇ ಚಂದ್ರನ್ನ ವಾಟ್ಸ್ಯಾಪ್ ನಲ್ಲಿ ದುಬೈ ಗೆಳೆಯರು ಕಳುಹಿಸಿದ್ರಲ್ಲಾ ಅದನ್ನು ನಿನ್ನ ಹೆಂಡ್ರು ಮೊಬೈಲಿಗೆ ಫಾರ್ವರ್ಡ್ ಮಾಡಿ ತೋರಿಸಬೇಕಿತ್ತು?**

ಹಾಗೇ ಮಾಡಿದ್ದೆ.

**ಹಂಗಿದ್ಮೇಲೆ ಆ ಚಂದ್ರನ್ನ ನೋಡಿ ಹೋಳಿಗೆ ಮಾಡು ಅನ್ನಬೇಕಿತ್ತು?**

ತಮ್ಮಾ ನನ್ನ ಮೆಸ್ಸೇಜಿಗೆ ಉತ್ತರವಾಗಿ ಅವರು ಹೋಳಿಗೆ ಊಟದ ಒಂದು ಇಮೇಜನ್ನ ನನಗೆ ಫಾರ್ವರ್ಡ್ ಮಾಡಿ, ಹ್ಯಾಪಿ ಯುಗಾದಿ ಎಂದು ಮೆಸ್ಸೇಜ್ ಹಾಕಿದ್ಲು !

**ಹೋಗ್ಲಿ ಬಿಡು. ಈ ಕೋವಿಡ್ ಗದ್ದಲದಲ್ಲಿ ಹಬ್ಬದ ವಿಚಾರ ಯಾಕೆ?**

ಈಗ ಏನಿದ್ರೂ ಎಲೆಕ್ಷನ್ ಸುದ್ದಿ

**ಎಲೆಕ್ಷನ್ ಸುದ್ಧಿ ಬಂದ ಮೇಲೆ?**

ಸೀಡಿ ಸುದ್ಧಿ ಸಿಡಿಯುತ್ತೆ.

**ಹೌದೂ ಈ ಕೊರೊನಾ ಕಾವಿನಲ್ಲಿ ಲಾಕ್ ಡೌನ್ ಮಾಡ್ತಾರಾ?.**

ಇಲ್ಲ.

**ಮತ್ತೇ ಸ್ಕೂಲ್ ಗಳು ನಡೆಯುತ್ತಾ?**

ಇಲ್ಲ.

**ಇನ್ನು ಸಿನಿಮಾಗಳ ಪ್ರದರ್ಶನ?**

ನೋ ಛಾನ್ಸ್! ಇಲ್ಲ.

**ಹೊಗ್ಗೋ ಇವನ. ಬಹಳಷ್ಟು ವಿಷಯ ಇಲ್ಲ, ಇಲ್ಲ ಇಲ್ಲ ಆಗ್ತಾ ಅದಾವು. ದೇವರೇ ಕಾಪಾಡು ಅಂತ ಪ್ರಾರ್ಥನೆ ಮಾಡಬೇಕು. ಬಾ ದೇವಸ್ಥಾನಕ್ಕೆ ಹೋಗೋಣ.**

ಈಗ ಅದೂ ಸಾಧ್ಯವಿಲ್ಲ.

ಯಾಕೆ?

**ಸದ್ಯಕ್ಕೆ ಯಾವ ದೇವಸ್ಥಾನನೂ ತೆಗೆಯೋಲ್ಲ!**

ದೇವರಿಗೇ ಈ ಪರಿಸ್ಥಿತಿ! ಅಲ್ಲಪಾ ಒಂದೆಡೆ ಕೊರೊನಾ ಸೋಂಕಿನ ಸಂಖ್ಯೆ ಜಾಸ್ತಿ ಆಗ್ತಾ ಐತಿ. ಜೊತೆಗೆ ಸಾವಿನ ಸಂಖ್ಯೆ.ಒಂದೇ ಊರಲ್ಲಿ ಒಂದೇ ದಿನಕ್ಕೇ ಸಾವಿರಾರು ಜನ ಸಾಯುವ ಸಂದರ್ಭ ಬಂದರೇ?

**ಈಗಾಗಲೇ ಅಂತಹ ಸಂದರ್ಭ ಕೆಲವು ಕಡೆ ಬಂದೇತಿ.**

ಅಲ್ಲ ಪರಿಸ್ಥಿತಿ ಹೆಂಗೈತಿ?

**ಹೆಣ ಸುಡಕ್ಕೆ ಟೈಮು ಇಲ್ಲ! ಹೂಳಕ್ಕೆ ಜಾಗನೂ ಇಲ್ಲಾ!!!**

# ಆಕ್ಸಿಜನ್ ಸಿಗದೇ ಸಚಿವ ಸುರೇಶ್ ಕುಮಾರ್ ಆಪ್ತ ಸಹಾಯಕನ ಸಾವು

ಬೆಂಗಳೂರು, ಏ. 19 - ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರ ಆಪ್ತ ಸಹಾಯಕ ಹೆಚ್.ಜಿ.ರಮೇಶ್‌ಗೆ ಆಕ್ಸಿಜನ್ ದೊರೆಯದೇ ಸಾವನ್ನಪ್ಪಿದ್ದಾರೆ. ಕಳೆದ ಕೆಲವು ದಿನಗಳಿಂದ ಕೋವಿಡ್ ಸೋಂಕು ದೃಢಪಟ್ಟಿದ್ದು, ಅವರು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಅವರಿಗೆ ಸೂಕ್ತ ಸಮಯದಲ್ಲಿ ಆಕ್ಸಿಜನ್ ದೊರೆಯದೇ ಸಾವನ್ನಪ್ಪಿದ್ದಾರೆ.

# ನಾಳಿನ ಹಳೇಬಾತಿ ರಥೋತ್ಸವ ರದ್ದು

ದಾವಣಗೆರೆ, ಏ.19- ಇದೇ ದಿನಾಂಕ 21 ರಂದು ಬುಧವಾರ ರಾತ್ರಿ 10.30 ಕ್ಕೆ ಜರುಗಲಿದ್ದ ತಾಲ್ಲೂಕಿನ ಹಳೇಬಾತಿ ಶ್ರೀ ಆಂಜನೇಯ ಸ್ವಾಮಿ ಮಹಾರಥೋತ್ಸವವನ್ನು ಕೋವಿಡ್ ಹಿನ್ನೆಲೆಯಲ್ಲಿ ರದ್ದು ಮಾಡಲಾಗಿದೆ ಎಂದು ದೇವಸ್ಥಾನ ಸಮಿತಿ ಕನ್ವೀನಿಯರ್ ಪರಮೇಶ್ವರಪ್ಪ ತಿಳಿಸಿದ್ದಾರೆ. ಜಿಲ್ಲೆಯಾದ್ಯಂತ ಕೊರೊನಾ 2ನೇ ಅಲೆ ಹೆಚ್ಚುತ್ತಿರುವುದರಿಂದ ಮತ್ತು ಸಾರ್ವಜನಿಕರ ಆರೋಗ್ಯ ಕಾಪಾಡುವ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಭಕ್ತರು ಸಹಕರಿಸುವಂತೆ ಅವರು ಕೋರಿದ್ದಾರೆ.

| ರಂಜಾನ್ ರೋಜಾ ಸಮಯ | ದಿನಾಂಕ : 20.04.2021, ಇಫ್ತೇಯಾರಿ ಸಮಯ : 6-47 | ದಿನಾಂಕ 21.04.2021 ಸಹೇರಿ ಸಮಯ : 4-54 |
|---|---|---|

# ವೀಣಾ ನಂಜಣ್ಣನವರ ಜನಸಂಪರ್ಕ ಕಚೇರಿ ಆರಂಭ



ದಾವಣಗೆರೆ, ಏ. 19- ಮಹಾನಗರ ಪಾಲಿಕೆಯ 40ನೇ ವಾರ್ಡಿನ ಸದಸ್ಯರಾದ ಶ್ರೀಮತಿ ವೀಣಾ ನಂಜಣ್ಣ ಅವರು ಸಾರ್ವಜನಿಕ ಕುಂದು-ಕೊರತೆಗಳನ್ನು ಆಲಿಸಲು ಆಂಜನೇಯ ಬಡಾವಣೆ 13ನೇ ಕ್ರಾಸ್, ಬಸವೇಶ್ವರ ಪಾರ್ಕ್ ಹತ್ತಿರ ನೂತನವಾಗಿ ಆರಂಭಿಸಿರುವ ಜನಸಂಪರ್ಕ ಕಚೇರಿಯನ್ನು ಶಾಸಕ ಎಸ್.ಎ. ರವೀಂದ್ರನಾಥ್ ಉದ್ಘಾಟಿಸಿದರು.

ಮೇಯರ್ ಎಸ್.ಟಿ. ವೀರೇಶ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಅರುಣ್ ನಂಜಣ್ಣ, ಮಹಾನಗರ ಪಾಲಿಕೆ ನಾಮನಿರ್ದೇಶನ ಸದಸ್ಯ ಬಸವರಾಜ್, ಬಿಜೆಪಿ ಮುಖಂಡ, ಜಿಲ್ಲಾ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ ನಿರ್ದೇಶಕ ತ್ಯಾವಣಿಗಿ ವೀರಭದ್ರಸ್ವಾಮಿ ಡಿ.ಎಸ್. ಶಿವಶಂಕರ್ ಹಾಗೂ 40ನೇ ವಾರ್ಡ್‌ನ ಬಿಜೆಪಿ ಮುಖಂಡರು ಮತ್ತಿತರರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ ನಾಳೆ

ದಾವಣಗೆರೆ, ಏ. 19- ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ ಅವರು ನಾಡಿದ್ದು ದಿನಾಂಕ 21ರ ಬುಧವಾರ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಸಚಿವರು ಬೆಳಿಗ್ಗೆ ಬೆಂಗಳೂರಿನಿಂದ ಹೊರಟು 9.30ಕ್ಕೆ ದಾವಣಗೆರೆ ಪ್ರವಾಸಿ ಮಂದಿರ (ಸರ್ಕ್ಯೂಟ್ ಹೌಸ್)ಕ್ಕೆ ಆಗಮಿಸುವರು. ನಂತರ ಬೆ. 10 ಗಂಟೆಗೆ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಹಾಗೂ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಕೋವಿಡ್-19 ನಿಯಂತ್ರಣದ ಕುರಿತು ಕೈಗೊಳ್ಳಲಾಗಿರುವ ಹಾಗೂ ಕೈಗೊಳ್ಳಬೇಕಾಗಿರುವ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಮತ್ತು ಜಿಲ್ಲೆಯ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚೆ ನಡೆಸುವರು.

ಸಚಿವರು ಅದೇ ದಿನ ಮಧ್ಯಾಹ್ನ 2.30 ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

# ಸರ್ಕಾರಿ-ಖಾಸಗಿ ಬಸ್ ಚಾಲಕ, ನಿರ್ವಾಹಕರ ಮಧ್ಯೆ ಮಾತಿನ ಚಕಮಕಿ



ದಾವಣಗೆರೆ, ಏ.19- ಪ್ರಯಾಣಿಕರು ಸಂಚರಿಸುವ ಮಾರ್ಗದಲ್ಲಿ ಬಸ್ಸುಗಳನ್ನು ಓಡಿಸುವ ವಿಚಾರದಲ್ಲಿ ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರು ಹಾಗೂ ಖಾಸಗಿ ಬಸ್ ನೌಕರರ ನಡುವೆ ಜಟಾಪಟಿ, ಮಾತಿನ ಚಕಮಕಿಯೂ ನಡೆದು ನಿಲ್ದಾಣದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಸಾರಿಗೆ ಅಧಿಕಾರಿಗಳು ತಮಗೆ ನೀಡಿರುವ ಪರವಾನಗಿಯಂತೆ ಮಾರ್ಗ ರಹದಾರಿಯಲ್ಲಿ ಬಸ್ಸುಗಳನ್ನು ಓಡಿಸುವ ವಿಚಾರದಲ್ಲಿ ನಗರದ ಹೈಸ್ಕೂಲ್ ಮೈದಾನದಲ್ಲಿ ನಿರ್ಮಿಸಲಾಗಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್ ಚಾಲಕರ ನಡುವೆ ನಾ ಮುಂದು, ತಾ ಮುಂದು ಎನ್ನುವಂತೆ ತಮಗೆ ನೀಡಿರುವ ಮಾರ್ಗ ರಹದಾರಿಯಲ್ಲಿ ನಾವೇ ಮೊದಲು ಬಸ್ಸುಗಳನ್ನು ಬಿಡಬೇಕೆನ್ನುವ ವಿಚಾರದಲ್ಲಿ ಒಬ್ಬರಿಗೊಬ್ಬರು ಗಲಾಟೆಯಲ್ಲಿ ತೊಡಗಿದರು.

ಇದು ಕೆಎಸ್‌ಆರ್‌ಟಿಸಿ ಬಸ್ಸುಗಳು ನಿಲ್ಲುವ ಸ್ಥಳ, ಅಲ್ಲದೇ ನಾವುಗಳೇ ಈ ಮಾರ್ಗದಲ್ಲಿ ಸಂಚರಿಸಬೇಕು ಎಂದು ಕೆಎಸ್‌ಆರ್‌ಟಿಸಿ ಬಸ್ಸಿನ ಚಾಲಕರು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಖಾಸಗಿ ಬಸ್ ಚಾಲಕರು ಸಾರಿಗೆ ಇಲಾಖೆಯಿಂದ ಇದೇ ನಿಲ್ದಾಣದಿಂದ ಇದೇ ಮಾರ್ಗದಲ್ಲಿ ಸಂಚರಿಸುವಂತೆ ನಮಗೂ ರಹದಾರಿ ನೀಡಿದ್ದಾರೆ. ಕಾರಣ ನಾವುಗಳೇ ಮೊದಲು ಆ ಮಾರ್ಗದಲ್ಲಿ ಸಂಚರಿಸುತ್ತೇವೆ ಎಂದು ಒಬ್ಬರಿಗೊಬ್ಬರು ಪರಸ್ಪರ ವಾದ ಮಾಡಿಕೊಂಡಿದ್ದಾರೆ.

6ನೇ ವೇತನ ಆಯೋಗದ ಅನ್ವಯ ವೇತನ ಹೆಚ್ಚಳ ಮತ್ತು ತಮ್ಮನ್ನು ಸರ್ಕಾರಿ ನೌಕರರೆಂದು ಪರಿಗಣಿಸುವಂತೆ ಆಗ್ರಹಿಸಿ ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರು ಮುಷ್ಕರ ಆರಂಭಿಸಿ ಸೋಮವಾರ 13ನೇ ದಿನಕ್ಕೆ ಕಾಲಿಟ್ಟಿದೆ. ಮುಷ್ಕರದ ಹಿನ್ನೆಲೆಯಲ್ಲಿ ನೌಕರರು ಕರ್ತವ್ಯಕ್ಕೆ ಹಾಜರಾಗದೇ ಕೆಎಸ್‌ಆರ್‌ಟಿಸಿ ಸಾರಿಗೆ ಬಸ್‌ಗಳು ಸಂಚರಿಸದ ಕಾರಣ ಸಾರಿಗೆ ಇಲಾಖೆಯಿಂದ ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸುವ ಮಾರ್ಗಗಳಲ್ಲಿ ಖಾಸಗಿ ಬಸ್‌ಗಳು ಸಂಚರಿಸಲು ಅವಕಾಶ ನೀಡಲಾಗಿತ್ತು.

ಈ ಮಧ್ಯೆ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಆಯಾ ಮಾರ್ಗದಲ್ಲಿ ಓಡಿಸುವಂತೆ ಚಾಲಕರು ಮತ್ತು ನಿರ್ವಾಹಕರಿಗೆ ನಿಗಮವು ಮನವಿ ಮಾಡಿ, ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರೂ ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಇದರಿಂದಾಗಿ ಪ್ರಯಾಣಿಕರ ಅನುಕೂಲಕ್ಕಾಗಿ ಸರ್ಕಾರವು ಖಾಸಗಿ ಬಸ್ಸುಗಳ ಮಾಲೀಕರೊಂದಿಗೆ ಮಾತುಕತೆ ನಡೆಸಿ, ಕೆಎಸ್‌ಆರ್‌ಟಿಸಿ ಬಸ್ಸುಗಳು ಸಂಚರಿಸುವ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳಿಗೆ ಸಂಚರಿಸಲು ಅನುವು ಮಾಡಿಕೊಟ್ಟಿತ್ತು. ನಿಗಮವು ಇಷ್ಟೆಲ್ಲಾ ಕಸರತ್ತು ಮಾಡಿದ್ದರೂ ಸಹ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಆದರೆ ಇದೀಗ ದಿನೇ ದಿನೇ ನಿಗಮದ ಸಿಬ್ಬಂದಿಗಳು ಕೆಲಸಕ್ಕೆ ಹಾಜರಾಗುತ್ತಿದ್ದು, ಸಿಬ್ಬಂದಿಗಳ ಹಾಜರಾತಿಗೆ ತಕ್ಕಂತೆ ನಿಗಮವು ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ದಿನೇ ದಿನೇ ಹೆಚ್ಚಳ ಮಾಡುತ್ತಾ ಬಂದಿದೆ.

ಪ್ರಯಾಣಿಕರೂ ಸಹ ಕೆಎಸ್‌ಆರ್‌ಟಿಸಿ ಬಸ್ಸುಗಳತ್ತ ಮುಖ ಮಾಡುತ್ತಿದ್ದಾರೆ. ಇದರಿಂದಾಗಿ ನಮಗೆ ತೊಂದರೆ ಆಗುತ್ತಿದೆ. ಅಲ್ಲದೇ ನಿಗಮದ ಸಿಬ್ಬಂದಿಗಳು ನಮ್ಮಗಳ ವಿರುದ್ಧ ಜಗಳಕ್ಕೆ ಬರುತ್ತಿದ್ದಾರೆ ಎಂದು ಖಾಸಗಿ ಬಸ್ಸುಗಳ ಚಾಲಕರು, ನಿರ್ವಾಹಕರು ದೂರಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಕೆಎಸ್‌ಆರ್‌ಟಿಸಿ ನೌಕರರು ನಾವುಗಳು ಬಸ್ಸುಗಳನ್ನು ಓಡಿಸುವ ಮಾರ್ಗದಲ್ಲಿ ಅವರು ಓಡಿಸುತ್ತಿದ್ದರು. ಇದೀಗ ಕರ್ತವ್ಯಕ್ಕೆ ಬಂದಿದ್ದೇವೆ. ನಮ್ಮ ಮೇಲಿನ ಅಧಿಕಾರಿಗಳು ಸೂಚನೆ ನೀಡಿದಂತೆ ನಾವುಗಳು ಆಯಾ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸಬೇಕಾಗಿದೆ. ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದಲ್ಲಿ ಅವರಿಗೇನು ಕೆಲಸ ಎನ್ನುವ ವಾದ ಅವರದು.

ಈ ನಿಟ್ಟಿನಲ್ಲಿ ಸಾರಿಗೆ ಇಲಾಖೆ ಅಧಿಕಾರಿಗಳ ಬಳಿ ಅಸಮಾಧಾನ ವ್ಯಕ್ತಪಡಿಸಿರುವ ಖಾಸಗಿ ಬಸ್ಸಿನ ಸಿಬ್ಬಂದಿಗಳು ನಮಗೂ ಅದೇ ಮಾರ್ಗದಲ್ಲಿ ಬಸ್ಸುಗಳನ್ನು ಓಡಿಸಲು ಅವಕಾಶ ನೀಡಿ ಎಂದು ಕೇಳಿಕೊಂಡಿದ್ದಾರೆ. ಇದಲ್ಲದೇ ಕೆಎಸ್‌ಆರ್‌ಟಿಸಿ ಬಸ್ಸುಗಳು ರಸ್ತೆಗೆ ಇಳಿದಿದ್ದಕ್ಕೆ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಕಳೆದ 13 ದಿನಗಳಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ತಮ್ಮ ಬಸ್ಸುಗಳನ್ನು ನಿಲ್ಲಿಸಿಕೊಂಡು ಸಾರಿಗೆ ಅಧಿಕಾರಿಗಳು ನೀಡಿದ ರಹದಾರಿಯಂತೆ ಬಸ್ಸುಗಳನ್ನು ಓಡಿಸುತ್ತಿದ್ದ ಖಾಸಗಿ ಬಸ್ಸುಗಳು ಅನಿವಾರ್ಯವಾಗಿ ಪಕ್ಕದಲ್ಲೇ ಇರುವ ಖಾಸಗಿ ಬಸ್ ನಿಲ್ದಾಣಕ್ಕೆ ವಾಪಾಸ್ಸಾಗುವ ಅನಿವಾರ್ಯತೆ ಬಂದಿದೆ. ಕೆಎಸ್‌ಆರ್‌ಟಿಸಿ ಬಸ್ಸುಗಳು ಓಡುತ್ತಿರುವುದು ಸಂತೋಷದ ವಿಷಯ. ಈಗಾಗಲೇ ನಾವುಗಳು ಯಾವುದೇ ಕಡೆಗಳಲ್ಲಿ ಹೋಗಬೇಕಾದರೂ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲೇ ತೆರಳುತ್ತಿದ್ದೆವು. ಮುಷ್ಕರದಿಂದ ಅನಿವಾರ್ಯವಾಗಿ ಖಾಸಗಿ ಬಸ್ಸಿನಲ್ಲಿ ಓಡಾಡುವ ಪರಿಸ್ಥಿತಿ ಬಂದಿತ್ತು. ಇದೀಗ ಮತ್ತೆ ಸಾರಿಗೆ ನಿಗಮದ ಬಸ್ಸುಗಳು ರಸ್ತೆಗೆ ಇಳಿದಿರುವುದು ಸಂತೋಷದ ವಿಷಯವೂ ಹೌದು. ಅದಲ್ಲದೇ ಸುರಕ್ಷಿತವೂ ಹೌದು ಎನ್ನುತ್ತಾರೆ ಪ್ರಯಾಣಿಕರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte